
# ಅಜಾತ ಶತ್ರು



## ದಿ|| ಶ್ರೀ ಜಿ. ಮಲ್ಲಿಕಾರ್ಜುನಪ್ಪನವರು

ಲೋಕಸಭಾ ಮಾಜಿ ಸದಸ್ಯರು





# ವಿಶ್ವಗುರುವಾಗುವತ್ತ ಭಾರತ

ಮಾನ್ಯರೇ,

2047 ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ನಿಟ್ಟಿನಲ್ಲಿ ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜಿಯವರು ಸಿದ್ದರಾಗಿದ್ದಾರೆ. 2014 ರಲ್ಲಿ ಪ್ರಧಾನಿ ಮೋದಿಜಿವರು ಅಧಿಕಾರ ವಹಿಸಿಕೊಂಡ ನಂತರ ದೇಶದಲ್ಲಿ ಭೌತಿಕ, ಆರ್ಥಿಕ, ಸಾಮಾಜಿಕ, ಪಾರಂಪರಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕವಾಗಿ ಗಮನಾರ್ಹ ಬದಲಾವಣೆಗಳಾಗಿವೆ. ಅವರು ಕೇವಲ ಭಾಷಣಕ್ಕೆ ಸೀಮಿತವಾಗಿರದೇ ಅನುಷ್ಟಾನಕ್ಕೆ ತೆರೆದುಕೊಂಡಿದ್ದಾರೆ, ಒಬ್ಬ ನಾಯಕ ಹೇಗಿರಬೇಕೆಂದರೆ ದೇಶದ ಜನರನ್ನು ಕನಸು ಕಾಣಲು ಹಚ್ಚಬೇಕು, ಜನರು ಕಂಡ ಕನಸನ್ನು ನನಸು ಮಾಡಲು ನಾಯಕನಾದವರು ಶ್ರಮಿಸಬೇಕು ಬಹುಶ: ಈ ಎಲ್ಲಾ ಅಂಶಗಳನ್ನೂ ಚಾಚು ತಪ್ಪದೇ ಪಾಲಿಸುತ್ತಿರುವ ನಮ್ಮ ನಿಮ್ಮೆಲ್ಲರ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಜಿಯವರು ನಮಗೆ ಸಿಕ್ಕಿರುವುದು ಸೌಭಾಗ್ಯವಲ್ಲದೇ ಮತ್ತಿನ್ನೇನು?

**"21 ನೇ ಶತಮಾನದ ಭಾರತವು ಚಿಕ್ಕದಾಗಿ ಯೋಚಿಸುವುದಿಲ್ಲ "** ಎನ್ನುವ ಮೋದಿಜಿಯವರ ಮಾತಿನಲ್ಲಿನ ಧೃಢತೆಯನ್ನು, ಬದ್ದತೆಯನ್ನು ನಾವು ಗಮನಿಸಲೇಬೇಕು. ಭಾರತದ ಪ್ರಗತಿಯನ್ನು ನೋಡಿ ಜಗತ್ತು ಆಶ್ಚರ್ಯಚಕಿತವಾಗಿದೆ ಅಭಿವೃದ್ದಿಯ ವಿಷಯದಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕಲು ಜಗತ್ತು ಕಾತರಿಸುತ್ತಿದೆ ಇದಕ್ಕೆಲ್ಲ ಕಾರಣ ಮೋದಿಜಿ ಎನ್ನುವ ಮಹಾತ್ಮ. ಮೋದಿಜಿ ನೇತೃತ್ವದ ನಮ್ಮ ಸರ್ಕಾರ ದೇಶ ಮೊದಲು ಎನ್ನುವ ತತ್ವವನ್ನು ಪ್ರಮುಖವಾಗಿಟ್ಟುಕೊಂಡು ಮುನ್ನಡೆಯುತ್ತಿದೆ, 370 ನೇ ವಿಧಿಯ ರದ್ದತಿ, ರಾಮಮಂದಿರ ನಿರ್ಮಾಣ, ತ್ರಿವಳಿ ತಲಾಖ್ ಅಂತ್ಯ, ನಾರಿ ಶಕ್ತಿ ವಂದನ್, ಒನ್ ರ್‍ಯಾಂಕ್ ಒನ್ ಪೆನ್ಷನ್, ಛೀಫ್ ಆಫ್ ಡಿಫೆನ್ಸ್ ಸ್ಟಾಫ್ ಹುದ್ದೆಯ ರಚನೆಯಂತಹ ನೆನೆಗುದಿಗೆ ಬಿದ್ದಿದಂತಹ ಕಾರ್ಯಗಳನ್ನು ರಾಷ್ಟ್ರ ಮೊದಲು ಎನ್ನುವ ಚಿಂತನೆಯೊಂದಿಗೆ ಪೂರ್ಣಗೊಳಿಸಿದ್ದಾರೆ. 90 ದಶಕದಲ್ಲಿ ಶಂಕುಸ್ಥಾಪನೆಯಾದಂತಹ ಅನೇಕ ಯೋಜನೆಗಳನ್ನು ಪೂರ್ಣಗೊಳಿಸಲು ನರೇಂದ್ರ ಮೋದಿಜಿಯವರು ಬರಬೇಕಾಯಿತು. ನರ್ಮದಾ ಸೇತುವೆ, ನೂತನ ಪಾರ್ಲಿಮೆಂಟ್ ಭವನ, ಅತಿ ಎತ್ತರದ ಸರ್ಧಾರ್ ವಲ್ಲಭಬಾಯಿ ಪಟೇಲ್ ಪ್ರತಿಮೆ ಸ್ಥಾಪನೆಯಂತಹ ಯೋಜನೆಗಳು ಮೋದಿಜಿ ಕಾಲದಲ್ಲಿಯೇ ಶಂಕುಸ್ಥಾಪನೆಯಾಗಿ ಮೋದಿಜಿಯವರ ಕಾಲದಲ್ಲಿಯೇ ಲೋಕಾರ್ಪಣೆಯಾಗಿವೆ. ಭಾರತ ಜಾಗತಿಕವಾಗಿ ಆರ್ಥಿಕವಾಗಿ 5 ನೇ ಸ್ಥಾನದಲ್ಲಿ ಬಂದು ನಿಂತಿದೆ, ಅತೀ ಶೀಘ್ರವಾಗಿ ಮೂರನೇ ಸ್ಥಾನಕ್ಕೇರಲಿದೆ.

ಕಳೆದ ಹತ್ತು ವರ್ಷಗಳಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿಯೂ ಕೂಡ ದೊಡ್ಡ ಮಟ್ಟದ ಕಾರ್ಯಗಳಾಗಿವೆ, ದಾವಣಗೆರೆ ಮತ್ತು ಹರಿಹರ ನಗರಗಳಿಗೆ ಸುಂದರ ರೈಲ್ವೆ ನಿಲ್ದಾಣಗಳಿರಬಹುದು, ಗ್ರಾಮೀಣ ಭಾಗದ ಮನೆಗಳಿಗೆ ಶುದ್ದ ಕುಡಿಯುವ ನೀರಿನ ಯೋಜನೆಯಿರಬಹುದು, ದಾವಣಗೆರೆ ನಗರ ಹಾಗೂ ಹರಿಹರ ನಗರಕ್ಕೆ ಜಲಸಿರಿ ಯೋಜನೆಯಿರಬಹುದು, ಸ್ಮಾರ್ಟ್ ಸಿಟಿ ಯೋಜನೆಯಿರಬಹುದು, ದಾವಣಗೆರೆ ನಗರದ ಅಶೋಕ ಟಾಕೀಸ್ ರೈಲ್ವೆ ಗೇಟ್ ಸಮಸ್ಯೆಗೆ ಶಾಶ್ವತ ಪರಿಹಾರ ಇರಬಹುದು, ಗ್ರಾಮಸಡಕ್ ರಸ್ತೆಗಳಿರಬಹುದು, ಇಂತಹ ಹತ್ತು ಹಲವು ಯೋಜನೆಗಳು ಯಶಸ್ವಿಯಾಗಿ ಅನುಷ್ಟಾನಗೊಂಡಿವೆ. ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಹೆಚ್ಚಿನ ಅನುದಾನ ಬಳಸಿ ಮುಂಚೂಣಿಯಲ್ಲಿದ್ದೇನೆ. ಅತ್ಯಂತ ಕ್ರಿಯಾಶೀಲವಾಗಿ, ರಚನಾತ್ಮಕವಾಗಿ ಕಾರ್ಯನಿರ್ವಹಿಸುವ ಮೂಲಕ ಮೋದಿಜಿಯವರ ಅಭಿವೃದ್ಧಿಯ ನಾಗಾಲೋಟಕ್ಕೆ ನನ್ನ ಹೆಜ್ಜೆಯನ್ನೂ ಜೊತೆಯಾಗಿಸಿದ್ದೇನೆ.

ಮುಂಬರುವ ದಿನಗಳಲ್ಲಿ ಭಾರತ ಜಾಗತಿಕ ಕೇಂದ್ರವಾಗಬೇಕು ಎನ್ನುವ ಮೋದಿಜಿಯವರ ಆಶಯಕ್ಕೆ ನಾವೆಲ್ಲರೂ ಕೈಜೋಡಿಸಿ, ಮೂರನೇ ಬಾರಿಗೆ ಮೋದಿಜಿವರನ್ನು ಪ್ರಧಾನಿ ಗದ್ದುಗೆಯ ಮೇಲೆ ಕೂರಿಸಿ ಭವ್ಯ ಮತ್ತು ದಿವ್ಯ ಭಾರತವನ್ನು ಎದುರು ನೋಡುವ ಕಾತುರದ ಕ್ಷಣಗಳಿಗೆ ನಾವೆಲ್ಲರೂ ಸನ್ನದ್ಧರಾಗೋಣ.

ದೇಶದ ಅಭ್ಯುದಯಕ್ಕಾಗಿ, ದೇಶದ ಸರ್ವತೋಮುಖ ಬೆಳವಣಿಗೆಗಾಗಿ, ಭಾರತ ಜಾಗತಿಕ ಕೇಂದ್ರವಾಗಲು ಮೋದಿಜಿ ಬೆಂಬಲಿಸೋಣ, ದಾವಣಗೆರೆಯಿಂದ ಮತ್ತೊಮ್ಮೆ ಕಮಲವನ್ನು ದೆಹಲಿಗೆ ಕಳಿಸಲು ಸಂಕಲ್ಪ ಮಾಡೋಣ...

ಇಂತಿ ನಿಮ್ಮ

**ಡಾ. ಜಿ.ಎಂ. ಸಿದ್ದೇಶ್ವರ**

ಮಾಜಿ ಕೇಂದ್ರ ಸಚಿವರು, ಲೋಕಸಭಾ ಸದಸ್ಯರು, ದಾವಣಗೆರೆ

# ಸ್ಮಾರ್ಟ್ ಸಿಟಿ ಯೋಜನೆ: ರೂ. 1071 ಕೋಟಿ.





28.01.2016 ರಂದು ಮೊದಲ ಹಂತದಲ್ಲಿ ದಾವಣಗೆರೆ ನಗರವನ್ನು ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆ ಮಾಡಿ ಘೋಷಣೆ ಮಾಡಲಾಯಿತು.

ಅಂದಾಜು ರೂ.1071.00 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ಸಿಕ್ಕಿದೆ. ಕೈಗೆತ್ತಿಕೊಂಡಿರುವ 114 ಕಾಮಗಾರಿಗಳಲ್ಲಿ 101 ಕಾಮಗಾರಿಗಳು ಪೂರ್ಣಗೊಂಡಿವೆ, 13 ಕಾಮಗಾರಿಗಳು ಪ್ರಗತಿಯಲ್ಲಿವೆ.









- ★ ರೂ.26.42 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಖಾಸಗಿ ಬಸ್ಸು ನಿಲ್ದಾಣ ಮಾಡಲಾಗಿದೆ.
- ★ ರೂ. 10.00 ಕೋಟಿ ವೆಚ್ಚದಲ್ಲಿ ಜಗಳೂರು ರಸ್ತೆಯ ಅರಳೀಮರದ ಸರ್ಕಲ್ ಬಳಿ ಖಾಸಗಿ ಬಸ್ಸು ನಿಲ್ದಾಣ ನಿರ್ಮಾಣ ಮಾಡಲಾಗಿದೆ.
- ★ ರೂ.10.64 ಕೋಟಿ ವೆಚ್ಚದಲ್ಲಿ ಬೇತೂರು ರಸ್ತೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣ ನಿರ್ಮಾಣ ಮಾಡಲಾಗಿದೆ.
- ★ ರೂ.109.85 ಕೋಟಿ ವೆಚ್ಚದ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.
- ★ ಹೊಂಡದ ಸರ್ಕಲ್ ಬಳಿ ಜನಸೂರೆಗೊಳ್ಳುವ ಪುಷ್ಕರಣಿಯನ್ನು ರೂ.6.00 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. .
- ★ ಮಂಡಿಪೇಟೆ ಸುತ್ತಮುತ್ತ 6 ಸ್ಮಾರ್ಟ್ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ. ದಾವಣಗೆರೆ ನಗರದ ಸಿ.ಜಿ.ಆಸ್ಪತ್ರೆ ಆವರಣದಲ್ಲಿ ರೂ.11.33 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಟ್ರಾಮಾ ಕೇರ್ ಸೆಂಟರ್ ನಿರ್ಮಾಣ ಮಾಡಲಾಗಿದೆ.
- ★ ದಾವಣಗೆರೆ ನಗರದಲ್ಲಿ ಸುಸಜ್ಜಿತ ರಾಜಕಾಲುವೆಗಳನ್ನು ನಿರ್ಮಾಣ ಮಾಡಿ ಮಳೆಗಾಲದಲ್ಲಿ ನಗರದ ಬಡಾವಣೆಗಳಿಗೆ ನೀರು ನುಗ್ಗದಂತೆ ಮಾಡಲಾಗಿದೆ. ದಾವಣಗೆರೆ ನಗರದ ಉತ್ತರ ವಲಯ ಹಾಗೂ ದಕ್ಷಿಣ ವಲಯಗಳಲ್ಲಿ ಶಾಲಾ ಕೊಠಡಿಗಳು, ಅಂಗನವಾಡಿ ಕೇಂದ್ರಗಳು, ಹಾಗೂ ಸ್ಮಾರ್ಟ್ ಕ್ಲಾಸ್‌ಗಳನ್ನು ನಿರ್ಮಾಣ ಮಾಡಲಾಗಿದೆ.





## ಬೇತೂರು ರಸ್ತೆಯಲ್ಲಿ ಬಸ್ಸು ನಿಲ್ದಾಣ ಕಾಮಗಾರಿ ರೂ.10.64 ಕೋಟಿ.

## ಸ್ಮಾರ್ಟ್ ಸಿಟಿ ಯೋಜನೆ

- ಬಾಪೂಜಿ ಸಮುದಾಯ ಭವನದಿಂದ ಸಂಗೊಳ್ಳಿ ರಾಯಣ್ಣ ವೃತ್ತ ಅಕ್ತರ್ ರಾಜ ವೃತ್ತದವರೆಗೆ ರಿಂಗ್ ರಸ್ತೆ ಅಭಿವೃದ್ಧಿ 65 ಕೋಟಿ.
  ಯು.ಬಿ.ಡಿ.ಟಿ. ಕಾಲೇಜು ಆವರಣದಲ್ಲಿ 10 ಕೋಟಿ ವೆಚ್ಚದಲ್ಲಿ ಸಂಶೋಧನಾ ಕೇಂದ್ರ ಕಟ್ಟಡ ನಿರ್ಮಾಣ
- ನಗರದ ಡಿಸಿಎಂ ಟೌನ್ ಶಿಪ್ ನಲ್ಲಿರುವ ಅನಿಲ್ ಕುಂಬ್ಳೆ ಆಟದ ಮೈದಾನದಲ್ಲಿ ರೂ.6.50 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲಾಗಿದೆ.
- ನಗರದ ಫೈನ್ ಆರ್ಟ್ಸ್ ಕಾಲೇಜು ಆವರಣದಲ್ಲಿ ರೂ. 6.21 ಕೋಟಿ ವೆಚ್ಚದಲ್ಲಿ ಸ್ಥಳೀಯ ಜಾನಪದ ಸೊಗಡನ್ನು ಬಿಂಬಿಸುವ ಥೀಮ್ ಪಾರ್ಕ್ ಹಾಗೂ ಬಯಲು ರಂಗಮಂದಿರವನ್ನು ನಿರ್ಮಾಣ ಮಾಡಲಾಗಿದೆ.











ರೂ. 6.21 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಥೀಮ್ ಪಾರ್ಕ್ ಹಾಗೂ ಬಯಲು ರಂಗಮಂದಿರ.




ಸುಮಾರು ರೂ.20.00 ಕೋಟಿ ವೆಚ್ಚದಲ್ಲಿ ದಾವಣಗೆರೆ ನಗರದಲ್ಲಿ ಸುಸಜ್ಜಿತ ಹೊಸ ರೈಲ್ವೆ ನಿಲ್ದಾಣ ನಿರ್ಮಾಣ ಮಾಡಲಾಗಿದೆ.



ದಾವಣಗೆರೆ–ಚಿತ್ರದುರ್ಗ–ಹಿರಿಯೂರು–ತುಮಕೂರು ನಡುವೆ 200 ಕಿ.ಮೀ ಉದ್ದದ ರೂ.1800 ಕೋಟಿ ಮೊತ್ತದ ನೇರ ಹೊಸ ರೈಲು ಮಾರ್ಗ ಕಾಮಗಾರಿ ಪ್ರಗತಿಯಲ್ಲಿದೆ.




ಬೆಂಗಳೂರು–ದಾವಣಗೆರೆ–ಹುಬ್ಬಳ್ಳಿ–ಧಾರವಾಡ ನಡುವೆ ಸಂಚರಿಸಲು ಸ್ವದೇಶಿ ನಿರ್ಮಿತ ವಂದೇಭಾರತ್ ಟ್ರೈನನ್ನು ಪ್ರಾರಂಭಿಸಲಾಗಿದೆ.




ಹರಿಹರ ನಗರದಲ್ಲಿ ರೂ.25.00 ಕೋಟಿ ವೆಚ್ಚದ ರೈಲ್ವೆ ನಿಲ್ದಾಣದ ನೀಲನಕ್ಷೆ

ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಹರಿಹರ ನಗರದಲ್ಲಿ ರೂ.25.00 ಕೋಟಿ ವೆಚ್ಚದಲ್ಲಿ ಸುಸಜ್ಜಿತ ನೂತನ ರೈಲ್ವೆ ನಿಲ್ದಾಣ ಹಾಗೂ ಫ್ಲಾಟ್‌ಫಾರ್ಮ್ ವಿಸ್ತರಣೆ ಕಾಮಗಾರಿ ಪ್ರಗತಿಯಲ್ಲಿದೆ.



ಹರಿಹರ ನಗರದ ಅಮರಾವತಿ ಬಳಿ ರೂ.28.00 ಕೋಟಿ ವೆಚ್ಚದ ರೈಲ್ವೆ ಮೇಲು ಸೇತುವೆ ನಿರ್ಮಾಣ ಮಾಡಲಾಗಿದೆ.

# ರೈಲ್ವೆ ಯೋಜನೆಗಳು :



- ★ ದಾವಣಗೆರೆ ನಗರದ ಎ.ಪಿ.ಎಂ.ಸಿ. ಬಳಿ 24 ಕೋಟಿ ವೆಚ್ಚದಲ್ಲಿ ಮೇಲುಸೇತುವೆ ನಿರ್ಮಾಣ ಮಾಡಲಾಗಿದೆ.
- ★ ದಾವಣಗೆರೆ ನಗರದ ಡಿ.ಸಿ.ಎಂ.ಟೌನ್‌ಶಿಪ್ ಬಳಿಯಿರುವ ರೈಲ್ವೆ ಕೆಳಸೇತುವೆಯನ್ನು ರೂ.9.70 ಕೋಟಿ ವೆಚ್ಚದಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ.
- ★ ಅಶೋಕ ಚಿತ್ರಮಂದಿರದ ಬಳಿ ರೈಲ್ವೆ ಲೆವೆಲ್ ಕ್ರಾಸಿಂಗ್ 199 ರ ಬಳಿ ಲಘು ವಾಹನಗಳ ಸಂಚಾರಕ್ಕೆ ರೂ.3.00 ಕೋಟಿ ವೆಚ್ಚದಲ್ಲಿ ಕೆಳಸೇತುವೆ ನಿರ್ಮಾಣ ಮಾಡಲಾಗಿದೆ.
- ★ ಅಶೋಕ ಚಿತ್ರಮಂದಿರದ ರೈಲ್ವೆ ಗೇಟ್ ಬಳಿ ವಾಹನ ದಟ್ಟಣೆ ತಪ್ಪಿಸಲು ಬಾರಿ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಪದ್ಮಾಂಜಲಿ ಚಿತ್ರಮಂದಿರದ ಹತ್ತಿರ ರೂ.49.00 ಕೋಟಿ ವೆಚ್ಚದಲ್ಲಿ ಬೃಹತ್ ಕೆಳಸೇತುವೆ ನಿರ್ಮಾಣ ಹಾಗೂ ಪ್ಯಾರ್ಲಲ್ ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನ ವೆಚ್ಚ ಸೇರಿ ಅನುದಾನ ಮಂಜೂರಾಗಿದ್ದು ಕಾಮಗಾರಿ ಈಗ ಟೆಂಡರ್ ಹಂತದಲ್ಲಿದೆ.
- ★ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ದಾವಣಗೆರೆ ನಗರದ ರೈಲ್ವೆ ನಿಲ್ದಾಣದಲ್ಲಿ 1 ನೇ ಫ್ಲಾಟ್‌ಫಾರ್ಮ್‌ನ್ನು ರೂ.15.00 ಕೋಟಿ ವೆಚ್ಚದಲ್ಲಿ ವಿಸ್ತರಣೆ ಮಾಡಲಾಗುತ್ತಿದೆ.
- ★ ಅಶೋಕ ಚಿತ್ರಮಂದಿರ ರೈಲ್ವೆ ಗೇಟ್ ಬಳಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಗೇಟ್ ಹತ್ತಿರ ಬೆಂಗಳೂರು ನಗರದಲ್ಲಿ ನಿರ್ಮಾಣವಾಗಿರುವ ರೀತಿಯಲ್ಲಿಯೇ ಪಾದಚಾರಿ ಕೆಳಸೇತುವೆ ನಿರ್ಮಾಣ ಮಾಡಲು ರೂ.3.70 ಕೋಟಿ ಅನುದಾನಕ್ಕಾಗಿ ಸಮಗ್ರ ಯೋಜನಾ ವರದಿ ಸಲ್ಲಿಸಲಾಗಿದೆ. ಕಾಮಗಾರಿ ಅನುಮೋದನೆ ಹಂತದಲ್ಲಿದೆ.
- ★ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು ರೂ.7.00 ಕೋಟಿ ವೆಚ್ಚದಲ್ಲಿ 9 ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳನ್ನು ತೆರವುಗೊಳಿಸಿ ಸಬ್ ವೇಗಳನ್ನು ನಿರ್ಮಾಣ ಮಾಡಲಾಗಿದೆ.





ಎ.ಪಿ.ಎಂ.ಸಿ. ಬಳಿ ರೂ.28.00 ಕೋಟಿ ವೆಚ್ಚದ ಮೇಲುಸೇತುವೆ.









- ★ ಚಿಕ್ಕಜಾಜೂರು–ದಾವಣಗೆರೆ–ಹರಿಹರದವರೆಗೆ ರೈಲ್ವೆ ಲೈನ್ ಡಬ್ಲಿಂಗ್ ಮಾಡಲಾಗಿದೆ,

ಚಿಕ್ಕಜಾಜೂರುನಿಂದ ಹರಿಹರದವರೆಗೆ ರೂ.84 ಕೋಟಿ ವೆಚ್ಚದಲ್ಲಿ ರೈಲ್ವೆ ಲೈನ್ ವಿದ್ಯುದೀಕರಣ (ಎಲೆಕ್ಟ್ರಿಫಿಕೇಶನ್) ಮಾಡಲಾಗಿದೆ.






ಹರಿಹರದ ಬಳಿ ತುಂಗ ಭದ್ರಾ ನದಿ ಸೇತುವೆ ನಿರ್ಮಾಣ.



ಎನ್.ಹೆಚ್.13 ರಲ್ಲಿ ಜಗಳೂರು ದೊಣ್ಣೆಹಳ್ಳಿ ಜಂಕ್ಷನ್.



ದಾವಣಗೆರೆ ಬನಶಂಕರಿ ಬಡಾವಣೆ ಸೇತುವೆ.





- ★ ಚಿತ್ರದುರ್ಗದಿಂದ–ದಾವಣಗೆರೆ–ಹರಿಹರದ ಕುಮಾರಪಟ್ಟಣಂ ವರೆಗೆ ಅಂದಾಜು ರೂ.1200 ಕೋಟಿ ವೆಚ್ಚದಲ್ಲಿ 6 ಪಥದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲಾಗಿದೆ.
- ★ ಚಿತ್ರದುರ್ಗ–ಜಗಳೂರು–ಹೊಸಪೇಟೆ ಹೆದ್ದಾರಿಯನ್ನು ರೂ. 1388 ಕೋಟಿ ವೆಚ್ಚದಲ್ಲಿ ನಾಲ್ಕು ಪಥದ ಹೆದ್ದಾರಿಯನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ.
- ★ ಚಿತ್ರದುರ್ಗ–ಚನ್ನಗಿರಿ–ಶಿವಮೊಗ್ಗ ದ್ವಿಪಥ ಹೆದ್ದಾರಿಯನ್ನು ರೂ.334 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.
- ★ ದಾವಣಗೆರೆ ನಗರದ ಬಾಡಾ ಕ್ರಾಸ್ ಚಿಂದೋಡಿ ಸರ್ಕಲ್ ಬಳಿ ಬೆಂಗಳೂರು ಕಡೆಯಿಂದ ದಾವಣಗೆರೆ ನಗರಕ್ಕೆ ಪ್ರವೇಶ ಪಡೆಯುವ ವಾಹನಗಳು ಸರಾಗವಾಗಿ ಒಳಬರಲು ರೂ. 23.00 ಕೋಟಿ ವೆಚ್ಚದಲ್ಲಿ 12 x 5.5 ಮೀಟರ್ ಅಳತೆಯ ಎರಡು ಬೃಹತ್ ವೆಂಟ್‌ಗಳ ಕೆಳಸೇತುವೆ ನಿರ್ಮಾಣ ಮಾಡಲು ಮಂಜೂರಾತಿ ದೊರಕಿಸಿಕೊಡಲಾಗಿದೆ. ಸದರಿ ಕಾಮಗಾರಿ ಈಗ ಟೆಂಡರ್ ಹಂತದಲ್ಲಿದೆ.
- ★ ದಾವಣಗೆರೆ ನಗರದ ಬನಶಂಕರಿ ಬಡಾವಣೆ, ಹೊಸಕುಂದುವಾಡ ಹಾಗೂ ಕುಂದುವಾಡದ ಬಳಿ ಸಾರ್ವಜನಿಕರ ಅನುಕೂಲಕ್ಕಾಗಿ ಕೆಳಸೇತುವೆಗಳು ನಿರ್ಮಾಣ ಹಂತದಲ್ಲಿವೆ.
- ★ ಮರಿಯಮ್ಮನಹಳ್ಳಿ–ಹರಪನಹಳ್ಳಿ–ಹರಿಹರ–ಹೊನ್ನಾಳಿ–ಶಿವಮೊಗ್ಗ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇ ಏರಿಸಿ ತಾತ್ವಿಕ ಅನುಮೋದನೆ (In Principle) ನೀಡಲಾಗಿದ್ದು, ಅಭಿವೃದ್ಧಿ ಪಡಿಸಲು ಸಮಗ್ರ ಯೋಜನಾ ವರದಿ ಸಲ್ಲಿಸಿದೆ.
- ★ ದಾವಣಗೆರೆ–ಚನ್ನಗಿರಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿ ತಾತ್ವಿಕ ಅನುಮೋದನೆ (In Principle) ನೀಡಲಾಗಿದ್ದು, ಅಭಿವೃದ್ಧಿಪಡಿಸಲು ಸಮಗ್ರ ಯೋಜನಾ ವರದಿ ಸಲ್ಲಿಸಿದೆ.

## ದಿವ್ಯಾಂಗ ವ್ಯಕ್ತಿಗಳ ಕೌಶಲ್ಯಾಭಿವೃದ್ಧಿ ಪುನರ್ವಸತಿ ಸಬಲೀಕರಣ ಸಂಯುಕ್ತ ಪ್ರಾದೇಶಿಕ ಕೇಂದ್ರ

ದಿವ್ಯಾಂಗ ಜನರ ಶ್ರೇಯೋಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಕರ್ನಾಟಕ ಮತ್ತು ಗೋವಾ ಈ ಎರಡೂ ರಾಜ್ಯಗಳ ದಿವ್ಯಾಂಗ ಜನರಿಗೆ ಅನುಕೂಲ ಕಲ್ಪಿಸುವ ಕೊಡುವ ನಿಟ್ಟಿನಲ್ಲಿ 2017 ರಲ್ಲಿ ದಾವಣಗೆರೆ ನಗರಕ್ಕೆ ಈ ಸಂಯುಕ್ತ ಪ್ರಾದೇಶಿಕ ಕೇಂದ್ರವನ್ನು ಮಂಜೂರು ಮಾಡಿಸಲಾಗಿದೆ.

★ಈ ಕೇಂದ್ರಕ್ಕೆ ದಾವಣಗೆರೆ ತಾಲ್ಲೂಕು ವೊಡ್ಡಿನಹಳ್ಳಿ ಬಳಿ 9 ಎಕರೆ ಹಾಗೂ ಕೊಗ್ಗನೂರು ಬಳಿ 7.23 ಎಕರೆ ಹೀಗೆ ಒಟ್ಟು 16.23 ಎಕರೆ ಸರ್ಕಾರಿ ಜಮೀನು ನೀಡಲಾಗಿದೆ.

★ವೊಡ್ಡಿನಹಳ್ಳಿ ಈಗಾಗಲೇ ರೂ.25 ಕೋಟಿ ವೆಚ್ಚದಲ್ಲಿ 18 ಸಾವಿರ ಚದುರ ಅಡಿಯ ಸುಸಜ್ಜಿತ ಕಟ್ಟಡವನ್ನು ನಿರ್ಮಾಣ ಮಾಡಿ ಸೇವೆಗೆ ಅರ್ಪಿಸಲಾಗಿದೆ.

★ದಾವಣಗೆರೆಯಲ್ಲಿ ಈ ಕೇಂದ್ರ ಪ್ರಾರಂಭವಾದ ನಂತರ ಇಲ್ಲಿಯವರೆಗೆ 5881 ವಿಕಲಾಂಗ ವ್ಯಕ್ತಿಗಳು 33,368 ಬಾರಿ ಕೇಂದ್ರಕ್ಕೆ ಭೇಟಿ ನೀಡಿ ಸೇವೆ ಪಡೆದಿದ್ದಾರೆ.








★ 4169 ವಿಕಲಾಂಗರಿಗೆ ಟಿ ಎಲ್ ಎಮ್ ಕಿಟ್ ಸೇರಿದಂತೆ ವಿವಿಧ ಸಾಧನಾ ಸಲಕರಣೆಗಳನ್ನು ವಿತರಣೆ ಮಾಡಲಾಗಿದೆ. 699 ದೈಹಿಕ ವಿಕಲಾಂಗರಿಗೆ ವೀಲ್ ಚೇರ್, 645 ವಿಕಲಾಂಗರಿಗೆ ಶ್ರವಣ ಸಾಧನಗಳನ್ನು ವಿತರಣೆ ಮಾಡಲಾಗಿದೆ. 53,625 ವಿಕಲಾಂಗರಿಗೆ ಹಾಗೂ ಅವರ ಆರೈಕೆದಾರರಿಗೆ, ಪೋಷಕರುಗಳಿಗೆ 463 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

★ ಒಟ್ಟಾರೆಯಾಗಿ ದಾವಣಗೆರೆಯ ಈ ಕೇಂದ್ರಕ್ಕೆ ಕೇಂದ್ರ ಸರ್ಕಾರದಿಂದ ರೂ.58 ಕೋಟಿಯಷ್ಟು ಅನುದಾನ ನಿಗಧಿಯಾಗಿದ್ದು, 2 ನೇ ಹಂತದಲ್ಲಿ ವೊಡ್ಡಿನಹಳ್ಳಿ ಬಳಿ ಬಾಕಿ ಉಳಿದಿರುವ ಜಾಗ ಬಳಸಿಕೊಂಡು

★ ದಿವ್ಯಾಂಗ ಜನರಿಗೆ MATP- Sports Complex ( Motor Activity Therapy Complex) ಈ ಕ್ರೀಡಾ ಸಮುಚ್ಚಯ. Multiple Therapeutic Swimming Pool ( ಬಹು ಚಿಕಿತ್ಸಕ ಈಜುಕೊಳ ) ನಿರ್ಮಾಣಕ್ಕೂ ಸಹ ಪ್ರಸ್ಥಾವನೆ ಸಲ್ಲಿಸಲಾಗಿದೆ.

★ ಅಲ್ಪಾವಧಿ ಮತ್ತು ದೀರ್ಘಾವಧಿ ಕೋರ್ಸುಗಳನ್ನು ಮಾಡುವ ವಿದ್ಯಾರ್ಥಿಗಳು ಮತ್ತು ವಿಕಲಚೇತನರ ವಸತಿಗೆ ಅನುವು ಮಾಡಿ ಕೊಡಲು 100 ಹಾಸಿಗೆಗಳ ಹಾಸ್ಟೆಲ್ ಸೌಲಭ್ಯವನ್ನು ಒದಗಿಸಿಕೊಡಲಾಗುವುದು.


★ ಕೇಂದ್ರ ಸರ್ಕಾರದ ಪವರ್ ಗ್ರಿಡ್ ಕಾರ್ಪೋರೇಷನ್ ವತಿಯಿಂದ ಕಾರ್ಪೋರೇಟ್ ಸೆಕ್ಟರ್ ರೆಸ್ಪಾನ್ಸಿಬಿಲಿಟಿ ಫಂಡ್ ಅನುದಾನದಲ್ಲಿ ರೂ.14.00 ಲಕ್ಷ ಮೊತ್ತದಲ್ಲಿ ದಿವ್ಯಾಂಗರ ಅನುಕೂಲಕ್ಕಾಗಿ ಮಿನಿ ಬಸ್ ಒದಗಿಸಲಾಗಿದೆ.





ವೊಡ್ಡಿನಹಳ್ಳಿ ಬಳಿ ನಿರ್ಮಾಣಗೊಂಡಿರುವ ರೂ.25.00 ಕೋಟಿ ವೆಚ್ಚದ ಸಿ.ಆರ್.ಸಿ. ಕೇಂದ್ರ ಕಟ್ಟಡ.

# ಆರೋಗ್ಯ ಕ್ಷೇತ್ರಕ್ಕೆ ಭರಪೂರ ಅನುದಾನ

- ★ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ಭರಪೂರ ಅನುದಾನ ಮಂಜೂರು ಮಾಡಿಸಲಾಗಿದೆ.
- ★ ನ್ಯಾಷನಲ್ ಹೆಲ್ತ್ ಮಿಷನ್ ಯೋಜನೆಯಡಿ ದಾವಣಗೆರೆ ನಗರದ ಸಿ.ಜಿ.ಆಸ್ಪತ್ರೆ ಬಳಿ 200 ಹಾಸಿಗೆಗಳ ತಾಯಿ ಮಕ್ಕಳ ಆಸ್ಪತ್ರೆಯನ್ನು ರೂ. 34 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.
- ★ ದಾವಣಗೆರೆ ನಗರದ ಕೆ.ಆರ್. ಮಾರ್ಕೆಟ್ ಬಳಿ 150 ಹಾಸಿಗೆಗಳ ತಾಯಿ ಮಕ್ಕಳ ಆಸ್ಪತ್ರೆಯನ್ನು ರೂ.11 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗಿದೆ.
- ★ ಹರಿಹರ ನಗರದಲ್ಲಿ 20 ಕೋಟಿ ವೆಚ್ಚದಲ್ಲಿ 50 ಹಾಸಿಗೆಯ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ.
- ★ ದಾವಣಗೆರೆ ನಗರದ ಇ.ಎಸ್.ಐ. ಆಸ್ಪತ್ರೆಯನ್ನು 50 ಹಾಸಿಗೆ ಸಾಮರ್ಥ್ಯದಿಂದ 100 ಹಾಸಿಗೆಯ ಆಸ್ಪತ್ರೆಯನ್ನಾಗಿ 12 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗಿದೆ. ದಾವಣಗೆರೆ ನಗರದ ಚಿಗಟೇರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಜರ್ಝರಿತ ಮಹಿಳೆಯರಿಗಾಗಿ ಸಖೀ ಒನ್ ಸ್ಟಾಪ್ ಕೇಂದ್ರವನ್ನು ರೂ.45 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.
- ★ ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿ ದಾವಣಗೆರೆ ನಗರದ ಚಿಗಟೇರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ರೂ.100 ಲಕ್ಷ ವೆಚ್ಚದಲ್ಲಿ ಸಮಗ್ರ ಸಾರ್ವಜನಿಕ ಅರೋಗ್ಯ ಪ್ರಯೋಗಾಲಯವನ್ನು ನಿರ್ಮಾಣ ಮಾಡಲಾಗಿದೆ.
- ★ ದಾವಣಗೆರೆ ನಗರದ ಚಿಟಗೇರಿ ಸಾರ್ವಜನಿಕ ಆಸ್ಪತ್ರೆಗೆ ಬಹು ಅವಶ್ಯವಾಗಿದ್ದ ಎಂ.ಆರ್.ಐ ಸ್ಕ್ಯಾನಿಂಗ್ ಯಂತ್ರವನ್ನು ರೂ. 6.50 ಕೋಟಿ ವೆಚ್ಚದಲ್ಲಿ ಒದಗಿಸಲು ಅನುದಾನ ಒದಗಿಸಲಾಗಿದೆ. (ಟೆಂಡರ್ ಹಂತದಲ್ಲಿದೆ)




## ಜಲಸಿರಿ ಯೋಜನೆ ರೂ. 620.00 ಕೋಟಿ









- ★ ದಾವಣಗೆರೆ ನಗರದ ಸಾರ್ವಜನಿಕರಿಗೆ ದಿನದ 24 x 7 ಶುದ್ಧ ಕುಡಿಯುವ ನೀರು ಒದಗಿಸಲು ರೂ.620.00 ಕೋಟಿ ವೆಚ್ಚದ ಜಲಸಿರಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ.
- ★ ದಾವಣಗೆರೆ ನಗರದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 70 ಕಿ.ಮೀ ಮೇನ್ ರೈಸಿಂಗ್ ಪೈಪ್ ಲೈನ್ ಕಾಮಗಾರಿ ಮಾಡಲಾಗಿದೆ, 1340 ಕಿ.ಮೀ ಸಬ್ ಪೈಪ್ ಲೈನ್ ಕಾಮಗಾರಿ ಮೂಲಕ ನೀರನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆ.
- ★ ದಾವಣಗೆರೆ ನಗರದ ವ್ಯಾಪ್ತಿಯಲ್ಲಿ 50 ವಲಯಗಳನ್ನು ಮಾಡಲಾಗಿದ್ದು, ಸುಮಾರು 97589 ಮನೆಗಳಿಗೆ ದಿನದ 24 x 7 ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆ ರೂಪಿಸಲಾಗಿದೆ. ಈಗಾಗಲೇ ಶೇಕಡ 90 ರಷ್ಟು ಯೋಜನೆ ಪೂರ್ಣಗೊಂಡಿದ್ದು, ಕೆಲವೇ ದಿನಗಳಲ್ಲಿ ದಾವಣಗೆರೆ ನಗರದ ಪ್ರತಿ ಮನೆಗೆ 24 x 7 ನೀರು ಸರಬರಾಜಾಗಲಿದೆ.
- ★ ಹರಿಹರ ನಗರದ 17300 ಮನೆಗಳಿಗೆ ದಿನದ 24 x 7 ಕುಡಿಯುವ ನೀರು ಸರಬರಾಜು ಮಾಡಲು ರೂ.45 ಕೋಟಿ ಅನುದಾನ ನೀಡಲಾಗಿದೆ.

### ಅಮೃತ್ ಸಿಟಿ ಯೋಜನೆ

ಕೇಂದ್ರ ಸರ್ಕಾರದ ನಗರಾಭಿವೃದ್ದಿ ಇಲಾಖೆಯಿಂದ ಅಮೃತ್ ಸಿಟಿ ಯೋಜನೆಯಡಿ ದಾವಣಗೆರೆ ನಗರಕ್ಕೆ ರೂ.179.96 ಕೋಟಿ ಅನುದಾನ ಒದಗಿಸಲಾಗಿದೆ. ಈ ಅನುದಾನದಲ್ಲಿ ದಾವಣಗೆರೆ ನಗರಕ್ಕೆ 24 x 7 ಕುಡಿಯುವ ನೀರು ಒದಗಿಸುವ ಜಲಸಿರಿ ಯೋಜನೆಯೊಂದಿಗೆ ಹೊಂದಾಣಿಕೆ ಅನುದಾನವನ್ನಾಗಿ ಬಳಸಿಕೊಳ್ಳಲಾಗಿದೆ.

**ಅಮೃತ್ ಸಿಟಿ ಯೋಜನೆಯಡಿ 5 ಕೋಟಿ ಮೊತ್ತದಲ್ಲಿ ನಗರದ ಪಾರ್ಕ್‌ಗಳ ಅಭಿವೃದ್ದಿ**

- ★ ದಾವಣಗೆರೆ ವಾರ್ಡ್ ನಂ.30 ರಲ್ಲಿ ಗ್ಲಾಸ್ ಹೌಸ್ ಪಾರ್ಕ್ ಅಭಿವೃದಿ 2.50 ಕೋಟಿ.
- ★ ದಾವಣಗೆರೆ ನಗರದ ದೇವರಾಜ್ ಅರಸ್ ಬಡಾವಣೆಯ "ಬಿ" ಬ್ಲಾಕ್‌ನ ಈಜುಕೊಳದ ಪಕ್ಕದಲ್ಲಿ ಪಾರ್ಕ್ ಅಭಿವೃದ್ದಿ 0.81 ಕೋಟಿ.
- ★ ದಾವಣಗೆರೆ ನಗರದ ವಾರ್ಡ್ ನಂ.29 ರ ನಿಜಲಿಂಗಪ್ಪ ಬಡಾವಣೆಯಲ್ಲಿ ಪಾರ್ಕ್ ಅಭಿವೃದ್ದಿ 0.60 ಕೋಟಿ.

ದಾವಣಗೆರೆ ನಗರದ ವಾರ್ಡ್ ನಂ. 33 ರ ಕೆ.ಟಿ.ಜೆ. ನಗರದ ಡಾಂಗೆ ಪಾರ್ಕ್ ಅಭಿವೃದ್ದಿ 0.59 ಕೋಟಿ.

ದಾವಣಗೆರೆ ನಗರದ ವಾರ್ಡ್ ನಂ.36 ಚಿಕ್ಕಮ್ಮಣ್ಣಿ ದೇವರಾಜ್ ಅರಸ್ ಬಡಾವಣೆ ಪಾರ್ಕ್ ಅಭಿವೃದ್ದಿ 0.50 ಕೋಟಿ.



- ★ ಮಾರ್ಚ್ 2018 ರಂದು ಪ್ರಾರಂಭ ದಾವಣಗೆರೆ ನಗರದ ಪ್ರಧಾನ ಅಂಚೆಕಛೇರಿಯಲ್ಲಿ ಅಂಚೆಕಛೇರಿ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಪ್ರಾರಂಭಿಸಿ ಇಲ್ಲಿಯವರೆಗೆ 50,000 ಕ್ಕೂ ಹೆಚ್ಚು ಜನರಿಗೆ ಪಾಸ್‌ಪೋರ್ಟ್ ವಿತರಣೆ ಮಾಡಲಾಗಿದೆ.

## ದಾವಣಗೆರೆ ಜಿಲ್ಲೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ಕಛೇರಿ ಮಂಜೂರು





- ★ ಈ ಮೊದಲು ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲ್ಲೂಕು, ಹರಿಹರ ತಾಲ್ಲೂಕು, ಜಗಳೂರು ತಾಲ್ಲೂಕು ಈ ಮೂರು ತಾಲ್ಲೂಕುಗಳು ಚಿತ್ರದುರ್ಗ ಜಿಲ್ಲಾ ಅಂಚೆ ಕಛೇರಿ ಅಧೀಕ್ಷಕರ ವಿಭಾಗಕ್ಕೆ ಸೇರ್ಪಡೆಯಾಗಿದ್ದವು. ಚನ್ನಗಿರಿ ತಾಲ್ಲೂಕು ಹಾಗೂ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳು ಶಿವಮೊಗ್ಗ ಅಂಚೆ ಅಧೀಕ್ಷಕರ ವಿಭಾಗಕ್ಕೆ ಒಳಪಟ್ಟಿದ್ದವು.
- ★ ಸುಗಮ ಆಡಳಿತ ನಿರ್ವಹಣೆಗಾಗಿ ಹಾಗೂ ಸಣ್ಣ ಕೆಲಸಕ್ಕೂ ಚಿತ್ರದುರ್ಗ ಹಾಗೂ ಶಿವಮೊಗ್ಗ ನಗರಗಳಿಗೆ ಅಲೆದಾಡುವುದನ್ನು ತಪ್ಪಿಸುವ ಸಲುವಾಗಿ ದಾವಣಗೆರೆ ಜಿಲ್ಲೆಯ ಆರು ತಾಲ್ಲೂಕುಗಳನ್ನು ಒಳಗೊಂಡು ದಾವಣಗೆರೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ವಿಭಾಗವನ್ನು ಸ್ಥಾಪನೆ ಮಾಡಿಸಲಾಗಿದೆ.
- ★ ದೇವರಾಜ್ ಅರಸ್ ಬಡಾವಣೆಯ ಅಂಚೆ ಇಲಾಖೆಯ ಸ್ವಂತ ನಿವೇಶನದಲ್ಲಿ ದಾವಣಗೆರೆ ವಿಭಾಗೀಯ ಅಂಚೆ ಅಧೀಕ್ಷಕರ ಕಛೇರಿಯನ್ನು ನಿರ್ಮಾಣ ಮಾಡಲು ಈಗಾಗಲೇ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆ ಅನುಮೋದನೆ ಹಂತದಲ್ಲಿದೆ.





## ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ (STPI)



- ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಿಂದ ದಾವಣಗೆರೆ ನಗರಕ್ಕೆ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಕೇಂದ್ರವನ್ನು ಮಂಜೂರು ಮಾಡಿಸಲಾಗಿದೆ.

- 2022ರ ನವೆಂಬರ್ 25ರಂದು ಈ ಕೇಂದ್ರವನ್ನು ಉದ್ಘಾಟನೆ ಮಾಡಲಾಗಿದೆ. ದಾವಣಗೆರೆ ವಲಯದಲ್ಲಿ ಮಾಹಿತಿ ತಂತ್ರಜ್ಞಾನದ ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ ಈ ಕೇಂದ್ರವನ್ನು ಸ್ಥಾಪನೆ ಮಾಡಲಾಗಿದೆ.

- ದಾವಣಗೆರೆ ನಗರದ ಜೆ.ಹೆಚ್.ಪಟೇಲ್ ಬಡವಾಣೆಯಲ್ಲಿರುವ ಮೈಸೂರು ಮುಕ್ತ ವಿಶ್ವವಿದ್ಯಾನಿಲಯದ ಕಟ್ಟಡದಲ್ಲಿ 10,000 ಚದುರ ಅಡಿ ಜಾಗದಲ್ಲಿ ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಇನ್‌ಕುಬೇಷನ್ ಸೆಂಟರ್ ಸ್ಥಾಪನೆ ಮಾಡಲಾಗಿದೆ. ಇಲ್ಲಿ 102 ಆಸನ ವ್ಯವಸ್ಥೆಯ ಪ್ಲಗ್ ಅಂಡ್ ಪ್ಲೇ ವ್ಯವಸ್ಥೆ ಒದಗಿಸಲಾಗಿದೆ. ಈಗಾಗಲೇ 5 ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ.
- 2ನೇ ಹಂತದಲ್ಲಿ ಈ ಕೇಂದ್ರಕ್ಕೆ ಸರ್ಕಾರಿ ಜಮೀನು ಒದಗಿಸಿ ಕೇಂದ್ರವನ್ನು ವಿಸ್ತರಣೆ ಮಾಡುವ ಉದ್ದೇಶ ಹೊಂದಲಾಗಿದೆ.





: 2014-19 ಹಾಗೂ 2019-24ರವರೆಗೆ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ವಿವರ :

| ಕ್ರ. ಸಂ | ವಿಧಾನಸಭಾ ಕ್ಷೇತ್ರ | ಸಮುದಾಯ ಭವನ | ಗ್ರಾಮೀಣ ಸಂತೆ ಕಟ್ಟೆ | ಸಿಮೆಂಟ್ ಕಾಂಕ್ರೀಟ್ ರಸ್ತೆ | ರಂಗಮಂದಿರ | ಹೈ-ಮಾಸ್ಟ್ | ಶಾಲಾ ಕೊಠಡಿ | R.O. Plant | ಬಸ್ ತಂಗುದಾಣ | ಅಂಗನವಾಡಿ ಕಟ್ಟಡ | ಕುಡಿಯುವ ನೀರಿನ ಪೂರೈಕೆ | ಇತರೆ | ಒಟ್ಟು (ರೂ. ಲಕ್ಷಗಳಲ್ಲಿ) |
|---|---|---|---|---|---|---|---|---|---|---|---|---|---|
| 1 | ಜಗಳೂರು | 118.00 | 5.00 | 93.00 | 25.00 | 20.00 | 157.00 | 42.50 | 33.00 | - | 52.45 | 21.00 | **566.95** |
| 2 | ದಾವಣಗೆರೆ ಉತ್ತರ | 122.00 | - | 5.00 | 4.00 | 12.50 | 61.00 | 37.50 | 3.00 | 8.00 | 25.64 | 129.50 | **408.14** |
| 3 | ದಾವಣಗೆರೆ ದಕ್ಷಿಣ | 57.00 | - | 48.00 | - | 7.50 | 41.00 | - | 3.00 | - | 60.08 | 40.50 | **255.08** |
| 4 | ಹರಪನಹಳ್ಳಿ | 20.00 | - | 132.00 | 76.50 | - | 85.00 | 67.50 | 51.00 | 7.00 | 5.00 | 68.50 | **512.50** |
| 5 | ಹರಿಹರ | 98.00 | 29.00 | 83.50 | 7.00 | 12.50 | 193.75 | 15.00 | 30.00 | 4.00 | 36.00 | 55.40 | **564.15** |
| 6 | ಹೊನ್ನಾಳಿ | 111.00 | 21.00 | 13.00 | 12.00 | 5.00 | 216.00 | 24.25 | 66.50 | 5.00 | 12.74 | 66.00 | **552.49** |
| 7 | ಚನ್ನಗಿರಿ | 36.00 | - | 229.00 | 56.50 | 102.50 | 52.00 | 20.50 | 78.00 | 2.50 | 13.90 | 51.00 | **641.90** |
| 8 | ಮಾಯಕೊಂಡ | 80.00 | 10.00 | 61.50 | 12.00 | 77.50 | 257.00 | 58.50 | 70.50 | 21.00 | 18.03 | 123.00 | **789.03** |
| | ಒಟ್ಟು | **642.00** | **65.00** | **663.00** | **193.00** | **237.50** | **1062.75** | **265.75** | **335.00** | **47.50** | **223.84** | **554.90** | **4290.24** |











## ಮೊದಲ ಗ್ರಾಮ ಪಂಚಾಯತಿ – ಮುಸ್ಟೂರು, ಜಗಳೂರು ತಾಲ್ಲೂಕು

ದಾವಣಗೆರೆ ಜಿಲ್ಲೆಯಲ್ಲಿ ಮೊದಲ ಹಂತದ ಸಂಸದ್ ಆದರ್ಶ ಗ್ರಾಮ ಯೋಜನೆಯಡಿ ಜಗಳೂರು ತಾಲ್ಲೂಕಿನ ಮುಸ್ಟೂರು ಗ್ರಾಮ ಪಮಚಾಯತಿಯನ್ನು ದಿನಾಂಕ 07.11.2015 ರಂದು ಸಮಗ್ರ ಅಭಿವೃದ್ದಿ ಮಾಡುವ ಉದೇಶದಿಂದ ಆಯ್ಕೆ ಮಾಡಿಕೊಳ್ಳಲಾಯಿತು, ಮುಸ್ಟೂರು ಗ್ರಾಮ ಪಂಚಾಯತಿಯಲ್ಲಿ ಮುಸ್ಟೂರು, ಮೂಡಲಮಾಚಿಕೆರೆ, ಸಿದ್ದಿಹಳ್ಳಿ ಗ್ರಾಮಗಳಿದ್ದು ಈ ಮೂರು ಗ್ರಾಮಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಂದ ಹಾಗೂ ಕೇಂದ್ರ ಸರ್ಕಾರದ ಸ್ವಾಮ್ಯದ ಬಿ.ಹೆಚ್.ಇ.ಎಲ್ ಕಂಪನಿಯ ಸಿ.ಎಸ್.ಆರ್ ಅನುದಾನದಡಿ ವಿವಿಧ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

| ಕಾಮಗಾರಿಗಳು | ಮೊತ್ತ (ಲಕ್ಷಗಳಲ್ಲಿ) |
|---|---|
| ಮೂರು ಗ್ರಾಮಗಳಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ | 287.00 |
| ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಜ್ಯೋತಿ ಯೋಜನೆ | 250.00 |
| ಮೂರು ಗ್ರಾಮಗಳಲ್ಲಿ ಶುದ್ದ ಕುಡಿಯುವ ನೀರಿನ ಘಟಕಗಳು | 19.50 |
| ಸೋಲಾರ್ ಬೀದಿ ದೀಪಗಳ ಅಳವಡಿಕೆ | 20.00 |
| ಉದ್ಯೋಗ ಖಾತ್ರಿ ಸೇರಿದಂತೆ ಇತರೆ ಯೋಜನೆಗಳಡಿ | 197.50 |
| ಇತರೆ ಕಾಮಗಾರಿಗಳು | 58.00 |
| ಒಟ್ಟು ಮೊತ್ತ | 831.00 ಲಕ್ಷ |

- ★ 52 ರೈತ ಫಲಾನುಭವಿಗಳಿಗೆ 25 ಕೆವಿ ಟ್ರಾನ್ಸ್ ಫಾರ್ಮರ್ ವಿತರಣೆ
- ★ 119 ಬಿಪಿಎಲ್ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ
- ★ 180 ಬೀದಿ ದೀಪಗಳ ಅಳವಡಿಕೆ.







## ಎರಡನೇ ಗ್ರಾಮ ಪಂಚಾಯತಿ ಮಲ್ಲಾಪುರ, ಚನ್ನಗಿರಿ ತಾಲ್ಲೂಕು

- ದಾವಣಗೆರೆ ಜಿಲ್ಲೆಯಲ್ಲಿ ಎರಡನೇ ಹಂತದ ಸಂಸದ್ ಆದರ್ಶ ಗ್ರಾಮ ಯೋಜನೆಯಡಿ ಚನ್ನಗಿರಿ ತಾಲ್ಲೂಕಿನ ಮಲ್ಲಾಪುರ ಗ್ರಾಮ ಪಂಚಾಯತಿಯನ್ನು ದಿನಾಂಕ 26.02.2016 ರಂದು ಸಮಗ್ರ ಅಭಿವೃದ್ಧಿ ಮಾಡುವ ಉದೇಶದಿಂದ ಆಯ್ಕೆ ಮಾಡಿಕೊಳ್ಳಲಾಯಿತು.

- ಮಲ್ಲಾಪುರ ಗ್ರಾಮ ಪಂಚಾಯತಿಯಲ್ಲಿ ಮಲ್ಲಾಪುರ ಮತ್ತು ಆಲೂರು ಗ್ರಾಮಗಳಿದ್ದು, ಈ ಎರಡೂ ಗ್ರಾಮಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಂದ ಹಾಗೂ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.50.00 ಲಕ್ಷ ಸೇರಿದಂತೆ ರೂ.2.11 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಬೆಸ್ಕಾಂ ಇಲಾಖೆಯಿಂದ 1.50 ಕೋಟಿ ವೆಚ್ಚದಲ್ಲಿ ರೈತರಿಗೆ ಟ್ರಾನ್ಸ್ ಫಾರ್ಮರ್ ವಿತರಣೆ, ಬಿ.ಪಿ.ಎಲ್ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ, ಬೀದಿ ದೀಪಗಳನ್ನು ಅಳವಡಿಸಲಾಗಿದೆ.











## ಪ್ರಧಾನಮಂತ್ರಿ ಜನವಿಕಾಸ ಯೋಜನೆಯಡಿ ರೂ.51.78 ಕೋಟಿ (PMJVY)

- ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಜನ ವಿಕಾಸ ಯೋಜನೆಯಡಿ ಅಲ್ಪಸಂಖ್ಯಾತ ಸಮುದಾಯದ ಅಸಮತೋಲನವನ್ನು ಸರಿದೂಗಿಸುವ ನಿಟ್ಟಿನಲ್ಲಿ ಅವರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸುಮಾರು ರೂ.51.78 ಕೋಟಿ ಅನುದಾನವನ್ನು ಒದಗಿಸಿದೆ.
- ಪ್ರಧಾನಮಂತ್ರಿ ಜನವಿಕಾಸ ಯೋಜನೆಯ ಶೇಕಡ 80 ರಷ್ಟು ಅನುದಾನವನ್ನು ಶಿಕ್ಷಣ, ಆರೋಗ್ಯ, ಮತ್ತು ಕೌಶಲ್ಯ ತರಬೇತಿ ಯೋಜನೆಗೆ ಮೀಸಲಿಡಲಾಗಿದೆ.

1.ದಾವಣಗೆರೆ ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ 7.30 ಕೋಟಿ.
2.ದಾವಣಗೆರೆ ನಗರದಲ್ಲಿ ಕಾಮನ್‌ಸರ್ವೀಸ್ ಸೆಂಟರ್ ನಿರ್ಮಾಣ 1.40 ಕೋಟಿ.
3.ದಾವಣಗೆರೆ ನಗರದ ಬಿ.ಡಿ.ಲೇಔಟ್‌ನಲ್ಲಿ ಮೌಲಾನಾ ಅಜಾದ್ ಶಾಲ 2.35 ಕೋಟಿ.
4.ಸಂತೇಬೆನ್ನೂರು ನಗರದಲ್ಲಿ ಮೌಲನಾ ಅಜಾದ್ ಶಾಲ 2.35 ಕೋಟಿ.
5.ದಾವಣಗೆರೆ ನಗರದ ಕೆ.ಆರ್.ಮಾರ್ಕೆಟ್ ಬಳಿ ಮೌಲಾನಾ ಅಜಾದ್ ಮಾದರಿ ಶಾಲೆ ನಿರ್ಮಾಣಕ್ಕಾಗಿ 2.35 ಕೋಟಿ.
6.ದಾವಣಗೆರೆ ನಗರದಲ್ಲಿ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ 2.00 ಕೋಟಿ.
7.ಹರಿಹರ ನಗರದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ 0.15 ಲಕ್ಷ
8.ದಾವಣಗೆರೆ ನಗರದಲ್ಲಿ 250 ಜನ ಸಾಮರ್ಥ್ಯದ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ ನಿರ್ಮಾಣ 19.00 ಕೋಟಿ.
9.ದಾವಣಗೆರೆ ನಗರದ ಕೆ.ಟಿ.ಜೆ.ನಗರದಲ್ಲಿ ಮಹಿಳೆಯರ ಹೈಟೆಕ್ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ 12.40 ಕೋಟಿ.




ದಾವಣಗೆರೆ ನಗರದ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ ಕಟ್ಟಡ.

## ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆ (PMSY)

- ★ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದಲ್ಲಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಡಿ ಒಟ್ಟು 15 ಹಂತಗಳಲ್ಲಿ ರೂ.298 ಕೋಟಿ ವೆಚ್ಚದಲ್ಲಿ 716 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ





ಮಾಯಕೊಂಡ–ಕಂದಗಲ್ ರಸ್ತೆಯಲ್ಲಿ 21 ಕೋಟಿ ಮೊತ್ತದ ರಸ್ತೆ ಹಾಗೂ ಕಲ್ವರ್ಟ್ ನಿರ್ಮಾಣ.

## ಅಮೃತ್ ಸರೋವರ್ ಯೋಜನೆಗೆ ರೂ.7.35 ಕೋಟಿ

- ★ ಭಾರತದ 75 ನೇ ಸ್ವಾತಂತ್ರೋತ್ಸವದ ನಿಮಿತ್ತ ದೇಶದ ಪ್ರತಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕನಿಷ್ಟ 75 ಕೆರೆಗಳನ್ನು ಗೋಕಟ್ಟೆಗಳನ್ನು ಪುನಶ್ಚೇತನಗೊಳಿಸುವಂತೆ ಮಾನ್ಯ ಪ್ರಧಾನ ಮಂತ್ರಿಗಳು ಕರೆಕೊಟ್ಟಿದ್ದರು. ಏಪ್ರಿಲ್ 2022 ರಂದು ಪ್ರಾರಂಭವಾದ ಈ ಯೋಜನೆ 15 ನೇ ಆಗಸ್ಟ್ 2023 ಕ್ಕೆ ಮುಕ್ತಾಯಗೊಂಡಿತು. ದೇಶಾದ್ಯಂತ ಸುಮಾರು 50 ಸಾವಿರ ಕೆರೆಗಳನ್ನು ಪುನಶ್ಚೇತನಗೊಳಿಸುವ ಸಂಕಲ್ಪವನ್ನು ಕೇಂದ್ರ ಸರ್ಕಾರ ಹೊಂದಿತ್ತು. ಸುಮಾರು 83531 ಕೆರೆಗಳನ್ನು ಈ ಯೋಜನೆಯಡಿ ಗುರುತಿಸಿ ಕೆಲಸ ಆರಂಭಿಸಲಾಗಿತ್ತು, ಡಿಸೆಂಬರ್ 2023 ರ ವೇಳೆಗೆ 68119 ಕೆರೆಗಳ ಪುನಶ್ಚೇತನ ಕಾಮಗಾರಿ ಪೂರ್ಣಗೊಂಡಿವೆ.
- ★ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನರೇಗಾದಡಿ ರೂ.7.35 ಕೋಟಿ ಅನುದಾನವನ್ನು ಬಳಸಿಕೊಂಡು ಒಟ್ಟು 137 ಗ್ರಾಮಗಳಲ್ಲಿ ಕನಿಷ್ಟ 1 ಎಕರೆ ವಿಸ್ತೀರ್ಣವುಳ್ಳ ಕೆರೆಗಳು, ಗೋಕಟ್ಟೆಗಳು, ಇಂಗುಕೆರೆಗಳನ್ನು ಆಯ್ಕೆಮಾಡಿಕೊಂಡು ಪುನಶ್ಚೇತನಗೊಳಿಸಿ ಅಭಿವೃದ್ದಿಪಡಿಸಲಾಗಿದೆ.
- ★ ಚನ್ನಗಿರಿ ತಾಲ್ಲೂಕಿನಲ್ಲಿ 25 ಕೆರೆಗಳು, ದಾವಣಗೆರೆ ತಾಲ್ಲೂಕಿನಲ್ಲಿ 18 ಕೆರೆಗಳು, ಹರಿಹರ ತಾಲ್ಲೂಕಿನಲ್ಲಿ 17 ಕೆರೆಗಳು, ಹೊನ್ನಾಳಿ ತಾಲ್ಲೂಕಿನಲ್ಲಿ 29 ಕೆರೆಗಳು, ಜಗಳೂರು ತಾಲ್ಲೂಕಿನಲ್ಲಿ 25 ಕೆರೆಗಳು, ಹರಪನಹಳ್ಳಿ ತಾಲ್ಲೂಕಿನಲ್ಲಿ 13 ಕೆರೆಗಳನ್ನು ಅಭಿವೃದ್ದಿಪಡಿಸಲಾಗಿದೆ.



ಚನ್ನಗಿರಿ ತಾಲೂಕು ಹೊನ್ನೆಬಾಗಿ ಗ್ರಾಮದ ಗೋಕಟ್ಟೆ ಅಭಿವೃದ್ಧಿ

- ದಾವಣಗೆರೆ ನಗರದ ನಿಟ್ಟುವಳ್ಳಿಯಲ್ಲಿ 50 ಹಾಸಿಗೆಯ ವಿಮಾ ಕಾರ್ಮಿಕರ ಆಸ್ಪತ್ರೆಯನ್ನು ರೂ.31 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.
- 2022 ರಲ್ಲಿ ನಿಟ್ಟುವಳ್ಳಿಯಲ್ಲಿರುವ 50 ಹಾಸಿಗೆಯ ರಾಜ್ಯ ವಿಮಾ ಕಾರ್ಮಿಕರ ಆಸ್ಪತ್ರೆಯನ್ನು 100 ಹಾಸಿಗೆಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ, ಸದರಿ ಆಸ್ಪತ್ರೆಯ ಕಟ್ಟಡ ನಿರ್ಮಾಣಕ್ಕಾಗಿ ರೂ.15 ಕೋಟಿ ಅನುದಾನ ನೀಡಲಾಗಿದ್ದು, ಕಾಮಗಾರಿ ಮುಕ್ತಾಯದ ಹಂತದಲ್ಲಿದೆ.







ರೂ. 15 ಕೋಟಿ ವೆಚ್ಚದ ನಿಟ್ಟುವಳ್ಳಿ ಇ.ಎಸ್.ಐ. ಆಸ್ಪತ್ರೆ ಕಟ್ಟಡ.



* ಕೇಂದ್ರ ಸರ್ಕಾರದ ಮಾನವಸಂಪನ್ಮೂಲ ಸಚಿವಾಲಯದ ವತಿಯಿಂದ ದಾವಣಗೆರೆ ನಗರಕ್ಕೆ ಹೊಂದಿಕೊಂಡಿರುವ ಆವರಗೊಳ್ಳ ಗ್ರಾಮದ ಹತ್ತಿರ ಸುಮಾರು 8 ಎಕರೆ ಜಾಗದಲ್ಲಿ 13.85 ಕೋಟಿ ಅನುದಾನದಲ್ಲಿ ಸುಸಜ್ಜಿತ ಕೇಂದ್ರೀಯಾ ವಿದ್ಯಾಲಯ ಶಾಲೆಯನ್ನು ನಿರ್ಮಾಣ ಮಾಡಲಾಗಿದೆ.
* ಇತ್ತೀಚಿಗೆ ಕೇಂದ್ರೀಯಾ ವಿದ್ಯಾಶಾಲೆಯಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್ ನ್ನು ಸಹ ತೆರೆಯಲಾಗಿದೆ. ಸುಮಾರು 650 ಕ್ಕೂ ಹೆಚ್ಚು ಮಕ್ಕಳು ಈ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.











13.5 ಕೋಟಿ ವೆಚ್ಚದ ಕೇಂದ್ರೀಯಾ ವಿದ್ಯಾ ಶಾಲೆ ಕಟ್ಟಡ.



# ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ



## ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.32.42 ಕೋಟಿ (RKVY)

- ★ ಕೃಷಿ ಇಲಾಖೆಯಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ನಬಾರ್ಡ್ ಆರ್.ಐ.ಡಿ.ಎಫ್ ಯೋಜನೆಯಡಿ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ರೂ. 32.42 ಕೋಟಿ ಅನುದಾನದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.
- ★ ದಾವಣಗೆರೆ ತಾಲ್ಲೂಕಿನ ಆವರಗೆರೆಯಲ್ಲಿ ರೂ.9.50 ಕೋಟಿ ವೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್ (ಶೀಥಲೀಕರಣ ಘಟಕ) ನಿರ್ಮಾಣ ಮಾಡಲಾಗಿದೆ.
- ★ ಚನ್ನಗಿರಿ ತಾಲ್ಲೂಕು ದೇವರಹಳ್ಳಿಯಲ್ಲಿ ರೂ. 9.50 ಕೋಟಿ ವೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್ (ಶೀಥಲೀಕರಣ ಘಟಕ) ನಿರ್ಮಾಣ ಮಾಡಲಾಗಿದೆ.
- ★ ದಾವಣಗೆರೆ ತಾಲ್ಲೂಕಿನ ಆವರೆಗೆರೆಯಲ್ಲಿ ಉತ್ಕೃಷ್ಟತಾ ಕೇಂದ್ರ (ಸೆಂಟರ್ ಆಫ್ ಎಕ್ಸಲೆನ್ಸ್) ಕಾಡಜ್ಜಿಯಲ್ಲಿ ಸಂಶೋಧನ ಕೇಂದ್ರ ತೆರೆಯಲು ರೂ.4.00 ಕೋಟಿ ಅನುದಾನ ನೀಡಲಾಗಿದೆ.
- ★ ಹೊನ್ನಾಳಿ ತಾಲ್ಲೂಕಿನ ಹೆಚ್.ಕಡದಕಟ್ಟೆ ಗ್ರಾಮದಲ್ಲಿ ಸಮಗ್ರ ಕೃಷಿ ಪದ್ದತಿ ಉತ್ತೇಜಿಸಲು ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರ ತೆರೆಯಲು ರೂ.2.17 ಕೋಟಿ ಅನುದಾನ ಒದಗಿಸಲಾಗಿದೆ.
- ★ ದಾವಣಗೆರೆ ತಾಲ್ಲೂಕಿನ ಕಾಡಜ್ಜಿಯಲ್ಲಿರುವ ಬೀಜೋತ್ಪಾದನಾ ಕ್ಷೇತ್ರದ ಬಲವರ್ಧನೆಗಾಗಿ ರೂ.3.00 ಕೋಟಿ ಅನುದಾನ ಒದಗಿಸಲಾಗಿದೆ.
- ★ ಮಾಯಕೊಂಡ ವಿಧಾನಸಭಾ ಕ್ಷೇತ್ರದ ತ್ಯಾವಣಿಗೆ ಬೀಜೋತ್ಪಾದನಾ ಕೇಂದ್ರದ ಬಲವರ್ಧನೆಗಾಗಿ ರೂ.1.50 ಕೋಟಿ ಅನುದಾನ ಒದಗಿಸಲಾಗಿದೆ.
- ★ ಜಗಳೂರು ತಾಲ್ಲೂಕಿನ ಚಿಕ್ಕಬಂಟನಹಳ್ಳಿಯಲ್ಲಿರುವ ಬೀಜೋತ್ಪಾದನಾ ಕೇಂದ್ರದ ಬಲವರ್ಧನೆಗಾಗಿ ರೂ.1.55 ಕೋಟಿ ಅನುದಾನ ಒದಗಿಸಲಾಗಿದೆ.'
- ★ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಸವಾಪಟ್ಟಣ ಮತ್ತು ತ್ಯಾವಣಿಗೆಯಲ್ಲಿ ಹೊಸ ರೈತ ಸಂಪರ್ಕ ಕೇಂದ್ರಗಳ ಕಟ್ಟಡಗಳ ನಿರ್ಮಾಣಕ್ಕಾಗಿ ರೂ.1.20 ಕೋಟಿ ಅನುದಾನ ನೀಡಲಾಗಿದೆ.



ಆವರಗೆರೆ ಬಳಿ ನಿರ್ಮಾಣ ಹಂತದಲ್ಲಿರುವ ರೂ.9.50 ಕೋಟಿ ವೆಚ್ಚದ ಕೋಲ್ಡ್ ಸ್ಟೋರೇಜ್ ಕಟ್ಟಡ

# ಪ್ರಧಾನಮಂತ್ರಿ ಆದರ್ಶಗ್ರಾಮ ಯೋಜನೆ (PMAGY)



- ಪ್ರಧಾನಮಂತ್ರಿ ಆದರ್ಶಗ್ರಾಮ ಯೋಜನೆಯಡಿ ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ರೂ. 33.20 ಕೋಟಿ ಅನುದಾನ ಬಿಡುಗಡೆಯಾಗಿದೆ.

- 2011 ರ ಜನಗಣತಿಯ ವರದಿಯ ಪ್ರಕಾರ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡ 16.6 ರಷ್ಟು ಪರಿಶಿಷ್ಟ ಜನಾಂಗದವರು ಇದ್ದಾರೆ. ನರೇಂದ್ರ ಮೋದಿಜಿ ನೇತೃತ್ವದ ಎನ್.ಡಿ.ಎ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಹಲವಾರು ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಇದರ ಮುಂದುವರೆದ ಭಾಗವಾಗಿ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಈ ದೇಶದ ಹಳ್ಳಿಗಳಲ್ಲಿ ಅತಿ ಹೆಚ್ಚು ಪರಿಶಿಷ್ಟ ಜನಾಂಗದವರು ವಾಸಿಸುವ ಗ್ರಾಮಗಳನ್ನು ಗುರುತಿಸಿ ಅಂತಹ ಗ್ರಾಮಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಒಂದು ಗ್ರಾಮಕ್ಕೆ ತಲಾ ರೂ.40.00 ಲಕ್ಷ ಅನುದಾನ ಒದಗಿಸುತ್ತಿದೆ. ದೇಶಾದ್ಯಂತ ಸುಮಾರು 27000 ಇಂತಹ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಕರ್ನಾಟಕ ರಾಜ್ಯದಲ್ಲಿ 2018-19 ನೇ ಸಾಲಿನಿಂದ ಇಲ್ಲಿಯವರೆಗೆ ಇಂತಹ 1156 ಗ್ರಾಮಗಳನ್ನು ಗುರುತಿಸಲಾಗಿದ್ದು, ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿಯೂ ಸಹ 83 ಗ್ರಾಮಗಳನ್ನು ಗುರುತಿಸಿ ಅವುಗಳಿಗೆ ತಲಾ 40 ಲಕ್ಷ ಅನುದಾನ ಬಿಡುಗಡೆ ಮಾಡಿ ಶಾಲಾ ಕೊಠಡಿ, ಹೈಟೆಕ್ ಶೌಚಾಲಯ, ಸೋಲಾರ್ ಬೀದಿ ದೀಪ, ಅಂಗನವಾಡಿ ಕಟ್ಟಡ, ಕುಡಿಯುವ ನೀರಿನ ಯೋಜನೆಗಳು, ಕಾಂಕ್ರೀಟ್ ರಸ್ತೆ ಇಂತಹ ಹಲವು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

## ಪ್ರಧಾನಮಂತ್ರಿ ಆದಿ ಆದರ್ಶಗ್ರಾಮ ಯೋಜನೆ (PMAAGY)

- ಪ್ರಧಾನಮಂತ್ರಿ ಆದಿ ಆದರ್ಶಗ್ರಾಮ ಯೋಜನೆಯಡಿ ಪರಿಶಿಷ್ಟ ಪಂಗಡದವರು ಹೆಚ್ಚಾಗಿ ವಾಸಿಸುವ 30 ಗ್ರಾಮಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು ತಲಾ ರೂ.20.00 ಲಕ್ಷದಂತೆ 6.00 ಕೋಟಿ ಅನುದಾನ ಒದಗಿಸಲಾಗಿದೆ.









ಕೇಂದ್ರ ರಸ್ತೆ ನಿಧಿ ಯೋಜನೆಯಡಿ (ಸಿ.ಆರ್.ಎಫ್) ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೂ. 180 ಕೋಟಿ ಅನುದಾನದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

## ಪ್ರಧಾನಮಂತ್ರಿ ಕೃಷಿ ಸಿಂಚಯಿನಿ ಯೋಜನೆ

★ ಪ್ರಧಾನಮಂತ್ರಿ ಕೃಷಿ ಸಿಂಚಯಿನಿ ಯೋಜನೆಯಡಿ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೃಷಿ ಇಲಾಖೆಯಡಿಯಲ್ಲಿ ಜಲಾನಯನ ಅಭಿವೃದ್ದಿಗೆ ಸಂಬಂಧಿಸಿದಂತೆ 2014–15 ರಿಂದ 2023–24 ರವರೆಗೆ 130.56 ಕೋಟಿ ಅನುದಾನದಲ್ಲಿ ಕೃಷಿ ಹೊಂಡಗಳು, ಚೆಕ್ ಡ್ಯಾಮ್‌ಗಳು, ಜಿನುಗುಕೆರೆಗಳು, ನಾಲಾಬದುಗಳ ನಿರ್ಮಾಣ, ಗೋಕಟ್ಟೆ ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.







ಹೊನ್ನಾಳಿ ತಾಲ್ಲೂಕಿನಲ್ಲಿ ತುಂಗಾ ನಾಲಾ ಆಧುನೀಕರಣ ಕಾಮಗಾರಿಯನ್ನು ರೂ.343 ಕೋಟಿ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.














- ★ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ದಾವಣಗೆರೆ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ಸುಮಾರು 65569 ಜನ ರೈತರಿಗೆ ರೂ. 77.22 ಕೋಟಿ ಪರಿಹಾರ ಸಿಕ್ಕಿದೆ.
- ★ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಜಿಲ್ಲೆಯ 50585 ಜನ ರೈತರಿಗೆ ತೋಟಗಾರಿಕಾ ಬೆಳೆಗಳಿಗೆ ಅಂದಾಜು ರೂ. 110.51 ಕೋಟಿ ವಿಮಾ ಪರಿಹಾರ ಸಿಕ್ಕಿದೆ.
- ★ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಜಿಲ್ಲೆಯ 1,55,717 ರೈತರಿಗೆ 442 ಕೋಟಿ ಹಣ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಆಗಿದೆ.
- ★ ದಾವಣಗೆರೆ ಜಿಲ್ಲೆಯಲ್ಲಿ ರೈತರಿಗೆ 6.18 ಲಕ್ಷ ರೈತರಿಗೆ ಮಣ್ಣಿನ ಫಲವತ್ತತೆಯನ್ನು ತಿಳಿದುಕೊಳ್ಳಲು ಸಾಯಿಲ್ ಹೆಲ್ತ್ ಕಾರ್ಡುಗಳ ವಿತರಣೆ ಮಾಡಲಾಗಿದೆ.
- ★ ಪ್ರಧಾನಮಂತ್ರಿ ಕೃಷಿ ಸಿಂಚಯಿನಿ ಯೋಜನೆಯಡಿ ದಾವಣಗೆರೆ ಜಿಲ್ಲೆಗೆ ಕೃಷಿ ಇಲಾಖೆಯಡಿಯಲ್ಲಿ ಜಲಾನಯನ ಅಭಿವೃದ್ದಿಗೆ ಸಂಬಂಧಿಸಿದಂತೆ 2014–15 ರಿಂದ 2022–23 ರವರೆಗೆ 90.00 ಕೋಟಿ ಅನುದಾನದಲ್ಲಿ ಕೃಷಿ ಹೊಂಡಗಳು, ಚೆಕ್ ಡ್ಯಾಮ್‌ಗಳು, ಜಿನುಗುಕೆರೆಗಳು, ನಾಲಾಬದುಗಳ ನಿರ್ಮಾಣ, ಗೋಕಟ್ಟೆ ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
- ★ ಪ್ರಧಾನಮಂತ್ರಿ ಕೃಷಿ ಸಿಂಚಯಿನಿ ಯೋಜನೆಯಡಿ ತೋಟಗಾರಿಕಾ ಬೆಳೆಗಳಿಗೆ 17258 ಹೆಕ್ಟೇರ್ ಪ್ರದೇಶದಲ್ಲಿ 18777 ರೈತರಿಗೆ ರೂ. 77.64 ಕೋಟಿ ಸಹಾಯಧನ ವಿತರಿಸಲಾಗಿದೆ.





## ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ



- ★ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ 2023ರ ವರೆಗೆ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ 402 ಕೊಠಡಿಗಳು, ಉನ್ನತೀಕರಿಸಿದ ಪ್ರೌಢಶಾಲೆಗಳಿಗೆ 60 ಕೊಠಡಿಗಳು, ಆದರ್ಶವಿದ್ಯಾಲಯಕ್ಕೆ 36 ಕೊಠಡಿಗಳು, ಹರಪನಹಳ್ಳಿಯ ಕಸ್ತೂರಿಬಾ ಗಾಂಧಿ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ 36 ಕೊಠಡಿಗಳು, ಒಟ್ಟು 534 ಕೊಠಡಿಗಳನ್ನು ರೂ.3601.39 ಲಕ್ಷಗಳಲ್ಲಿ ನಿರ್ಮಾಣ ಮಾಡಲಾಗಿದೆ.








## ಉಜ್ವಲ ಯೋಜನೆ

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1.33 ಲಕ್ಷ ಫಲಾನುಭವಿಗಳಿಗೆ ಉಚಿತ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ.

| | | | |
|---|---|---|---|
| ದಾವಣಗೆರೆ ತಾಲ್ಲೂಕು | 62570 | ಹೊನ್ನಾಳಿ ತಾಲ್ಲೂಕು | 6922 |
| ಜಗಳೂರು ತಾಲ್ಲೂಕು | 10343 | ನ್ಯಾಮತಿ ತಾಲ್ಲೂಕು | 2341 |
| ಚನ್ನಗಿರಿ ತಾಲ್ಲೂಕು | 10379 | ಹರಪನಹಳ್ಳಿ ತಾಲ್ಲೂಕ | 21426 |
| ಹರಿಹರ ತಾಲ್ಲೂಕು | 19019 | | |





## ಪಿ.ಎಂ. ಶ್ರೀ ಯೋಜನೆ

ಪಿ.ಎಂ. ಶ್ರೀ ಯೋಜನೆಯಡಿ ಶಾಲೆಗಳ ಅಭಿವೃದ್ಧಿ

**PM Schools for Rising India (PM SHRI Scheme)**

ದೇಶದಲ್ಲಿ 2020 ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಸೆಪ್ಟೆಂಬರ್ 2022 ರಲ್ಲಿ ಕೇಂದ್ರ ಸರ್ಕಾರ ಪ್ರಾಯೋಜಿತ PM Schools for Rising India (PM SHRI Scheme) ಜಾರಿಗೆ ತಂದಿದೆ.

ಗುಣಮಟ್ಟ ಮತ್ತು ಎಲ್ಲಾ ಹಂತಗಳಲ್ಲಿ ಸಮಗ್ರ ರೂಪಾಂತರವನ್ನು ಉತ್ತೇಜಿಸಲು ಸಮಗ್ರ, ಸಮರ್ಪಿತ ಮತ್ತು ಅಂತರ್ಗತ ಮಧ್ಯಸ್ಥಿಕೆಗಳೊಂದಿಗೆ ದೇಶಾದ್ಯಂತ 14.500 PM SHRI ಶಾಲೆಗಳನ್ನು ಸ್ಥಾಪಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.




ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿಯೂ ಸಹ ಮೊದಲ ಹಂತದಲ್ಲಿ 7 ಶಾಲೆಗಳು ಹಾಗೂ ಎರಡನೇ ಹಂತದಲ್ಲಿ 10 ಶಾಲೆಗಳನ್ನು ಈ ಯೋಜನೆಯಡಿ ಆಯ್ಕೆ ಮಾಡಲಾಗಿದೆ. ಮೊದಲ ಹಂತದಲ್ಲಿ ಆಯ್ಕೆಯಾದ ಪ್ರತಿ ಶಾಲೆಗಳಿಗೆ ಅಗತ್ಯ ಮೂಲಭೂತ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ತಲಾ ರೂ.40.00 ಲಕ್ಷದಂತೆ 2.80 ಕೋಟಿ ಅನುದಾನ ಬಿಡುಗಡೆಯಾಗಿದೆ. ಇನ್ನುಳಿದಂತೆ 10 ಶಾಲೆಗಳಿಗೆ ಮುಂದಿನ ಹಂತದಲ್ಲಿ ಅನುದಾನ ಬಿಡುಗಡೆಯಾಗಲಿದೆ.

## ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ

ತೋಟಗಾರಿಕೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ, ನಿರ್ವಹಣೆ, ಕೃಷಿಹೊಂಡ, ಸಮುದಾಯ ಕೆರೆ,ಪಾಲಿಮನೆ, ನೆರಳುಪರದೆ, ಪ್ಲಾಸ್ಟಿಕ್ ಹೊದಿಕೆ, ಪ್ಯಾಕ್ ಹೌಸ್ ನಿರ್ಮಾಣ, ರೈತರಿಗೆ ತರಬೇತಿ, ಸಂಸ್ಕರಣಾ ಘಟಕಗಳ ನಿರ್ಮಾಣ ಸೇರಿದಂತೆ ಇತರೆ ಕಾಮಗಾರಿಗಳಿಗೆ ರೂ. 35 ಕೋಟಿ ಸಹಾಯಧನ ನೀಡಲಾಗಿದೆ.







## ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ (ಪಿ.ಎಂ.ಇ.ಜಿ.ಪಿ)

ದಾವಣಗೆರೆ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಿಮೆಂಟ್ ಬ್ರಿಕ್ಸ್, ಊದಬತ್ತಿ ತಯಾರಿಕೆ, ಬ್ಯೂಟಿಪಾರ್ಲರ್, ರೆಡಿಮೇಡ್ ಗಾರ್ಮೆಂಟ್ಸ್, ಘಟಕಗಳನ್ನು ಸ್ಥಾಪನೆ ಮಾಡಿಕೊಂಡು 1023 ಜನರಿಗೆ ಸುಮಾರು 35.83 ಕೋಟಿ ಸಹಾಧನವನ್ನು ನೋಡಲ್ ಏಜೆನ್ಸಿಗಳಾದ ಕೈಗಾರಿಕೆ ಇಲಾಖೆ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ & ಗ್ರಾಮೋದ್ಯೋಗ ಆಯೋಗದಿಂದ ಪಡೆದಿರುತ್ತಾರೆ.





## ಸಿಟಿ ಗ್ಯಾಸ್ ದಿಸ್ಟ್ರಿಬ್ಯೂಷನ್ ಯೋಜನೆ

ದಾವಣಗೆರೆ ನಗರದ ಪ್ರತಿ ಮನೆಗೆ ಪೈಪ್ ಮುಖಾಂತರ ನ್ಯಾಚುರಲ್ ಗ್ಯಾಸ್ ಸರಬರಾಜು ಮಾಡಲು ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್‌ಯೋಜನೆಯಡಿ ಅವಕಾಶ ಕಲ್ಪಿಸಲಾಗಿದ್ದು, ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರು ದಿನಾಂಕ: 22.11.2018 ರಂದು ಚಾಲನೆ ನೀಡಿದ್ದಾರೆ.

ದಾವಣಗೆರೆ ನಗರದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಯುನಿಸನ್ ಎನ್ವಿಯಾರ್ನ್ ಪ್ರೈವೇಟ್ ಲಿಮಿಟೆಡ್ ಇವರಿಗೆ ವಹಿಸಲಾಗಿದ್ದು, ಮುಂದಿನ ಎರಡು ವರ್ಷದಲ್ಲಿ ದಾವಣಗೆರೆ ನಗರದ ಪ್ರತಿ ಮನೆಗೆ ಪೈಪ್ ಮುಖಾಂತರ ನ್ಯಾಚುರಲ್ ಗ್ಯಾಸ್ ಸರಬರಾಜಾಗಲಿದೆ.

ಈಗಾಗಲೇ ದಾವಣಗೆರೆ ನಗರದ ಸಿದ್ದವೀರಪ್ಪ ಲೇಔಟ್, ಎಸ್.ಎಸ್. ಬಡಾವಣೆ ಎ ಬ್ಲಾಕ್ ಮತ್ತು ಎಸ್ ಎಸ್ ಬಡಾವಣೆ ಬಿ ಬ್ಲಾಕ್‌ಗಳಲ್ಲಿ ಸುಮಾರು 30 ಕಿ.ಮೀನಷ್ಟು ಪೈಪ್ ಲೈನ್ ಕಾಮಗಾರಿ ಪೂರ್ಣಗೊಳಿಸಿದ್ದು 525 ಮನೆಗಳಿಗೆ ಈಗಾಗಲೇ ಪೈಪ್ಡ್ ನ್ಯಾಚುರಲ್ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ.








## ಪ್ರಧಾನಮಂತ್ರಿ ಸ್ವ-ನಿಧಿ ಯೋಜನೆ (PM-Svanidhi)





ನಗರ ಪ್ರದೇಶಗಳಲ್ಲಿನ ಬೀದಿ ಬದಿ ವ್ಯಾಪಾರಿಗಳು ನಗರ ಅನೌಪಚಾರಿಕ ಆರ್ಥಿಕತೆಯ ಒಂದು ಪ್ರಮುಖ ಘಟಕವನ್ನು ಪ್ರತಿನಿಧಿಸುತ್ತಾರೆ. ಲಭ್ಯತೆಯನ್ನು ಖಾತ್ರಿಪಡಿಸುವಲ್ಲಿ ಇವರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ನಗರವಾಸಿಗಳ ಮನೆ ಬಾಗಿಲಿಗೆ ಕೈಗೆಟಕುವ ದರದಲ್ಲಿ ಸರಕು ಮತ್ತು ಸೇವೆಗಳನ್ನು ಒದಗಿಸತ್ತಾರೆ.

ತಳ್ಳುಗಾಡಿ ವ್ಯಾಪಾರಿಗಳು, ಬೀದಿ ಬದಿ ಹಣ್ಣು, ತರಕಾರಿ, ಬೀದಿ ಬದಿ ಆಹಾರ ಮಾರಾಟ, ಬೀದಿ ಬದಿ ಜವಳಿ ಉಡುಪು ಮಾರುವವರು, ಪಾದರಕ್ಷೆಗಳನ್ನು ಮಾರುವವರು, ಕ್ಷೌರಿಕ ಅಂಗಡಿಯವರು, ಕುಶಲಕರ್ಮಿಗಳು, ಚಮ್ಮಾರರು, ಮನೆ ಮನೆಗೆ ಪೇಪರ್ ಹಾಕುವವರು, ಪಂಚರ್ ಅಂಗಡಿಯವರು, ಪಾನ್ ಅಂಗಡಿಗಳು, ಲಾಂಡ್ರಿ ಸೇವೆಯವರು, ಇಂತಹ ಹಲವಾರು ಕೋವಿಡ್-19 ಸಮಯದಲ್ಲಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದು, ಇವರೆಲ್ಲರ ನೆರವಿಗಾಗಿ ಪಿ.ಎಂ. ಸ್ವನಿಧಿ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಇವರಿಗೆ ಮೊದಲ ಹಂತದಲ್ಲಿ 10 ಸಾವಿರ, 2 ನೇ ಹಂತದಲ್ಲಿ 20 ಸಾವಿರ, ಮೂರನೇ ಹಂತದಲ್ಲಿ 50 ಸಾವಿರಗಳನ್ನು ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ. ಯಾವುದೇ ಗ್ಯಾರಂಟಿ ಇಲ್ಲದೇ ಹಣ ಮಂಜೂರು ಮಾಡಲಾಗುತ್ತದೆ, ಬಡ್ಡಿಯ ದರದಲ್ಲಿ ಶೇಕಡ 7 ರಷ್ಟು ಹಣವನ್ನು ಕೇಂದ್ರ ಸರ್ಕಾರವೇ ಬ್ಯಾಂಕ್‌ಗಳಿಗೆ ಭರಿಸಲಿದೆ.

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಗರ ಪ್ರದೇಶಗಳಲ್ಲಿ ಸುಮಾರು 16345 ಜನ ಬೀದಿ ವ್ಯಾಪಾರಿಗಳಿಗೆ ಸುಮಾರು 19.39 ಕೋಟಿಯಷ್ಟು ಹಣವನ್ನು ಅತ್ಯಂತ ಕಡಿಮೆ ಬಡ್ಡಿದರದಲ್ಲಿ ವಿತರಣೆ ಮಾಡಲಾಗಿದೆ.

### ಶ್ರೀಮತಿ ಹಾಲಮ್ಮ ಜಿ ಮಲ್ಲಿಕಾರ್ಜುನಪ್ಪ ಚಾರಿಟಬಲ್ ಟ್ರಸ್ಟ್‌ವತಿಯಿಂದ ಆಕ್ಸಿಜನ್ ಪ್ಲಾಂಟ್‌ಗಳ ಕೊಡುಗೆ

ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರಿಗೆ ಅವಶ್ಯವಾಗಿದ್ದ ಆಕ್ಸಿಜನ್ ಪೂರೈಕೆಗಾಗಿ ಶ್ರೀಮತಿ ಹಾಲಮ್ಮ ಜಿ ಮಲ್ಲಿಕಾರ್ಜುನಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ಹರಿಹರ ಸಾರ್ವಜನಿಕ ಆಸ್ಪತ್ರೆ, ಹರಪನಹಳ್ಳಿ ಸಾರ್ವಜನಿಕ ಆಸ್ಪತ್ರೆ ಹಾಗೂ ಚಿತ್ರದುರ್ಗ ಸಾರ್ವಜನಿಕ ಆಸ್ಪತ್ರೆ ಬಳಿ ತಲಾ 60 ಲಕ್ಷ ದಂತೆ ಒಟ್ಟು 1.80 ಕೋಟಿ ವೆಚ್ಚದಲ್ಲಿ ಆಕ್ಸಿಜನ್ ಪ್ಲಾಂಟ್‌ಗಳನ್ನು ಒದಗಿಸಲಾಗಿದೆ.









**ರಾಜ್ಯ ಸರ್ಕಾರದಲ್ಲಿ ಸಂಘಟಿತ ಹೋರಾಟ ಮಾಡಿದ ಫಲವಾಗಿ ಅನೇಕ ಯೋಜನೆಗಳು ದಾವಣಗೆರೆಗೆ ದೊರಕಿವೆ.**

ಸಾವಿರಾರು ಕೋಟಿ ಮೊತ್ತದ ಏತ ನೀರಾವರಿ ಯೋಜನೆಗಳು.

ಜಿಲ್ಲಾಡಳಿತ ಭವನ ಕಟ್ಟಡ ಸಂಕೀರ್ಣ.

ಆರ್.ಟಿ.ಓ. ಕಛೇರಿ ಕಟ್ಟಣ ಸಂಕೀರ್ಣ.

ದಾವಣಗೆರೆ ವಿಶ್ವವಿದ್ಯಾನಿಲಯ.

ಭದ್ರಾ ನಾಲಾ ಆಧುನೀಕರಣ.

ನ್ಯಾಯಾಲಯಗಳ ಸಂಕೀರ್ಣ.

ಕುವೆಂಪು ಕನ್ನಡ ಭವನ ಕಟ್ಟಡ.

















**ರಾಜ್ಯದಲ್ಲಿ ಬಿ.ಜೆ.ಪಿ. ಸರ್ಕಾರ ಆಡಳಿತವಿದ್ದ ಸಮಯದಲ್ಲಿ ದಾವಣಗೆರೆ ಜಿಲ್ಲೆಗೆ ನನ್ನ ಶಿಫಾರಸ್ಸಿನ ಮೇರೆಗೆ ಸುಮಾರು 140 ಕೋಟಿಯಷ್ಟು ಅನುದಾನವನ್ನು ಲೋಕೋಪಯೋಗಿ ಹಾಗೂ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ, ಚೆಕ್ ಡ್ಯಾಮ್ ನಿರ್ಮಾಣ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿಗೆ ಬಳಸಲಾಗಿದೆ.**





ಸಂಕ್ಲೀಪುರ ಬಳಿ ರೂ.8.00 ಕೋಟಿ ಮೊತ್ತದ ರಸ್ತೆ ಹಾಗೂ ಸೇತುವೆ ಕಾಮಗಾರಿ.





ಕೊಂಡಜ್ಜಿ ಬಳಿ ರೂ. 3 ಕೋಟಿ ವೆಚ್ಚದ ಸೇತುವೆ ಕಾಮಗಾರಿ.

ಜಂಗಮತುಂಬಿಗೆರೆ ಬಳಿ ಚೆಕ್ ಡ್ಯಾಮ್








ಹರಳಹಳ್ಳಿ ಬಳಿ ರೂ.2.60 ಕೋಟಿ ವೆಚ್ಚದಲ್ಲಿ ರಸ್ತೆ ಹಾಗೂ ಸೇತುವೆ ನಿರ್ಮಾಣ.

## ಜಿಲ್ಲಾ ಕ್ರೀಡಾಂಗಣಕ್ಕೆ ಸಿಂಥೆಟಿಕ್ ಟ್ರ್ಯಾಕ್





ದಾವಣಗೆರೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ ಸಿಂಥೆಟಿಕ್ ಟ್ರ್ಯಾಕ್ ಅಳವಡಿಸಲು ಕೇಂದ್ರ ಕ್ರೀಡಾ ಹಾಗೂ ಯುವ ಸಬಲೀಕರಣ ಇಲಾಖೆಯಿಂದ ರೂ.7.98 ಕೋಟಿ ಅನುದಾನ ಬಿಡುಗಡೆಯಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ.

★ದಾವಣಗೆರೆ ನಗರದಲ್ಲಿ ಯು.ಜಿ. ಕೇಬಲ್ ಅಳವಡಿಕೆಗಾಗಿ, ಹರಿಹರ ನಗರ, ಹೊನ್ನಾಳಿ ನಗರ, ಹರಪನಹಳ್ಳಿ ನಗರ, ಜಗಳೂರು ನಗರ, ಚನ್ನಗಿರಿ ನಗರಗಳಲ್ಲಿ ವಿದ್ಯುತ್ ಕಾಮಗಾರಿಗಳಿಗಾಗಿ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ (IPDS) 102 ಕೋಟಿ.




★ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ನಗರ ಪ್ರದೇಶದಲ್ಲಿ 1957 ಮನೆಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿ 4500 ಮನೆಗಳು ನಿರ್ಮಾಣವಾಗಿವೆ.

★ ಸ್ವಚ್ಛ ಭಾರತ್ ನಗರ ಯೋಜನೆಯಡಿ ದಾವಣಗೆರೆ ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ರೂ.25.78 ಕೋಟಿ ಅನುದಾನ ಒದಗಿಸಲಾಗಿದೆ. ಹರಿಹರ ನಗರದಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆಗೆ ರೂ.5.53 ಕೋಟಿ, ಚನ್ನಗಿರಿ ನಗರದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ರೂ.4.12 ಕೋಟಿ, ಹೊನ್ನಾಳಿ ನಗರದ ಘನತ್ಯಾಜ್ಯ ವಸ್ತು ನಿರ್ವಹಣೆಗೆ ರೂ.5.73 ಕೋಟಿ, ಜಗಳೂರು ನಗರದ ಘನತ್ಯಾಜ್ಯ ವಸ್ತು ನಿರ್ವಹಣೆಗೆ ರೂ.4.18 ಕೋಟಿ. ಅನುದಾನ ಒದಗಿಸಲಾಗಿದೆ.




★15 ನೇ ಹಣಕಾಸು ಯೋಜನೆಯಡಿ ದಾವಣಗೆರೆ ಮಹಾನಗರ ಪಾಲಿಕೆಗೆ ರೂ.25.79 ಕೋಟಿ, ಹರಿಹರ ನಗರಸಭೆಗೆ ರೂ.3.5 ಕೋಟಿ, ಚನ್ನಗಿರಿ ಪುರಸಭೆಗೆ ರೂ.93.00 ಲಕ್ಷ, ಮಲೇಬೆನ್ನೂರು ಪುರಸಭೆಗೆ ರೂ.1.36 ಕೋಟಿ, ಹೊನ್ನಾಳಿ ಪುರಸಭೆಗೆ ರೂ.68.00 ಲಕ್ಷ, ಜಗಳೂರು ಪಟ್ಟಣ ಪಂಚಾಯತಿಗೆ ರೂ.95.00 ಲಕ್ಷ, ನ್ಯಾಮತಿ ಪಟ್ಟಣ ಪಂಚಾಯತಿಗೆ ರೂ. 56.00 ಲಕ್ಷ ಅನುದಾನ ಒದಗಿಸಲಾಗಿದೆ.

★ಆಯುಷ್ಮಾನ್ ಭಾರತ್ ಯೋಜನೆಯಡಿ ಜಿಲ್ಲೆಯ 780590 ಜನರು ಚಿಕಿತ್ಸೆ ಪಡೆದಿದ್ದು ಅಂದಾಜು 138 ಕೋಟಿಯಷ್ಟು ಚಿಕಿತ್ಸಾ ವೆಚ್ಚವನ್ನು ಭರಿಸಲಾಗಿದೆ.




★ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರೀಕರಣ (PMFME) ಯೋಜನೆಯಡಿ 47 ಜನರಿಗೆ ರೂ.4.77 ಕೋಟಿ ಸಬ್ಸಿಡಿ ಸಹಿತ ಸಾಲ ನೀಡಲಾಗಿದೆ.

- ★ಪ್ರಧಾನಮಂತ್ರಿ ಜೀವನ್‌ಜ್ಯೋತಿ ಭಿಮಾ ಯೋಜನೆಯಡಿ ಜಿಲ್ಲೆಯಲ್ಲಿ 1,38,959 ಜನರು ವಿಮೆ ಮಾಡಿಸಿದ್ದಾರೆ. ಇದರಲ್ಲಿ 1457 ರ ಜನರಿಗೆ ವಿಮೆ ಲಭಿಸಿದೆ.
- ★ಪ್ರಧಾನಮಂತ್ರಿ ಜೀವನ್ ಸುರಕ್ಷಾ ಭಿಮಾ ಯೋಜನೆಯಡಿ ಜಿಲ್ಲೆಯಲ್ಲಿ 3,09,881 ಜನರು ವಿಮೆ ಮಾಡಿಸಿದ್ದಾರೆ. ಇದರಲ್ಲಿ 292 ಜನರಿಗೆ ವಿಮಾ ಮೊತ್ತ ಲಭಿಸಿದೆ.
- ★ಅಟಲ್ ಪೆನ್ಷನ್ ಯೋಜನೆಯಡಿ 45886 ಜನರು ಪಿಂಚಣಿ ಯೋಜನೆಗೆ ಒಳಪಟ್ಟಿದ್ದಾರೆ.
- ★ಸುಕನ್ಯಾ ಸಮೃದ್ಧಿ ಯೋಜನೆಯಡಿ 28485 ಜನ ಹೆಣ್ಣುಮಕ್ಕಳ ಹೆಸರಿನಲ್ಲಿ ಹಣ ತೊಡಗಿಸಿದ್ದಾರೆ.
- ★ಮುದ್ರಾ ಯೋಜನೆಯಡಿ ಜಿಲ್ಲೆಯ 1,62,364 ಫಲಾನುಭವಿಗಳಿಗೆ ರೂ.966 ಕೋಟಿಗೂ ಹೆಚ್ಚು ಸಾಲ ನೀಡಲಾಗಿದೆ.
- ★ಪ್ರಧಾನಮಂತ್ರಿ ಕೃಷಿ ಸಿಂಚಯಿನಿ ಯೋಜನೆಯಡಿ ತೋಟಗಾರಿಕಾ ಬೆಳೆಗಳಿಗೆ 26729 ಹೆಕ್ಟೇರ್ ಪ್ರದೇಶದಲ್ಲಿ 21391 ರೈತರಿಗೆರೂ.106 ಕೋಟಿ ಸಹಾಯಧನ ವಿತರಿಸಲಾಗಿದೆ.
- ★ಸ್ವಚ್ಚ ಭಾರತ್ ಯೋಜನೆಯಡಿ ಜಿಲ್ಲೆಯಲ್ಲಿ 190 ಕೋಟಿ ವೆಚ್ಚದಲ್ಲಿ 1.22 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ.
- ★ದಾವಣಗೆರೆ ಜಿಲ್ಲೆಯಲ್ಲಿ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ 2 ಕೋಟಿ ಅನುದಾನದಲ್ಲಿ 39 ಶುದ್ದ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಮಾಡಲಾಗಿದೆ.
- ★ಕೇಂದ್ರ ಸರ್ಕಾರ ಸರ್ಕಾರದ ಸಾಮಾಜಿಕ ಮತ್ತು ಸಬಲೀಕರಣ ಇಲಾಖೆಯ ವತಿಯಿಂದ ಅಲಿಮ್ಕೋ ಸಂಸ್ಥೆಯ ಸಹಯೋಗದೊಂದಿಗೆ ದಾವಣಗೆರೆ ಜಿಲ್ಲೆಯ 1700 ವಿಕಲಚೇತನರಿಗೆ ತ್ರಿಚಕ್ರ ವಾಹನ, ಊರುಗೋಲು, ಕೃತಕ ಕಾಲು, ಶ್ರವಣಸಾಧನಗಳನ್ನು ರೂ.1.60 ಕೋಟಿಗಳಲ್ಲಿ ವಿತರಣೆ ಮಾಡಲಾಗಿದೆ.
- ★ದಾವಣಗೆರೆ ಜಿಲ್ಲೆಯಲ್ಲಿ ಮಾರಣಾಂತಿಕ ಖಾಯಿಲೆಗಳಿಗೆ ತುತ್ತಾದ 191 ಜನರಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಚಿಕಿತ್ಸೆಗಾಗಿ 3.69 ಕೋಟಿ ಪರಿಹಾರ ಧನ ನೀಡಲಾಗಿದೆ.
  ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ದಾವಣಗೆರೆ ಜಿಲ್ಲೆಯ 25 ಜನರಿಗೆ ಚಿಕಿತ್ಸೆಗಾಗಿ 3.39 ಲಕ್ಷ ಪರಿಹಾರ ಧನ ನೀಡಲಾಗಿದೆ.
- ★ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಿ.ಎಸ್.ಆರ್. ಯೋಜನೆಯಡಿ ದಾವಣಗೆರೆ ಜಿಲ್ಲೆಯ 22 ಸರ್ಕಾರಿ ಪ್ರೌಢಶಾಲೆಗಳಿಗೆ ಹೈಟೆಕ್ ಶೌಚಾಲಯಗಳನ್ನು 1.70 ಕೋಟಿ ಅನುದಾನದಲ್ಲಿ ನಿರ್ಮಿಸಲಾಗಿದೆ.
- ★ದಾವಣಗೆರೆ ನಗರದ ಟಿ.ವಿ.ಸ್ಟೇಷನ್ ಕೆರೆಯನ್ನು ದಾವಣಗೆರೆ–ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 2.40 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗಿದೆ.
- ★ಕೇಂದ್ರ ಸರ್ಕಾರದ ಇಂದನ ಇಲಾಖೆಯ (ಗೇಲ್) ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಕಂಪನಿಯ ಸಿ.ಎಸ್.ಆರ್. ಯೋಜನೆಯಡಿ ದಾವಣಗೆರೆ ಜಿಲ್ಲೆಯ 50 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಶೌಚಾಲಯಗಳನ್ನು 2.00 ಕೋಟಿ ಅನುದಾನದಲ್ಲಿ ನಿರ್ಮಿಸಲಾಗಿದೆ.

## ವಿಮಾನ ನಿಲ್ದಾಣ ನಿರ್ಮಾಣ.

ದಾವಣಗೆರೆ ತಾಲ್ಲೂಕು ಆನಗೋಡು ಹಾಗೂ ಹಾಲುವರ್ತಿ ಗ್ರಾಮ ವ್ಯಾಪ್ತಿಯಲ್ಲಿ 375 ಎಕರೆ ಜಮೀನನ್ನು ವಿಮಾನ ನಿಲ್ದಾಣಕ್ಕಾಗಿ ಗುರುತಿಸಲಾಗಿದೆ. ಇದರಲ್ಲಿ 361.01 ಎಕರೆ ಜಮೀನನ್ನು ಭೂ–ಸ್ವಾಧೀನ ಪಡಿಸಿಕೊಳ್ಳಲು ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದವರು (KSIIDC) ರೂ. 142.00 ಕೋಟಿ ಅಂದಾಜು ಮಾಡಿ ಸರ್ಕಾರಕ್ಕೆ ಸಲ್ಲಿಸಿದ್ದಾರೆ.









## ಕೇಂದ್ರ, ಸಚಿವರಾಗಿ ಜಿ.ಎಂ. ಸಿದ್ದೇಶ್ವರ



# ಕೇಂದ್ರ ಸಚಿವರಾಗಿ ಜಿ.ಎಂ. ಸಿದ್ದೇಶ್ವರ




















# ಪಕ್ಷದ ಶಿಸ್ತಿನ ಸಿಪಾಯಿಯಾಗಿ...
















ಪಯಣದ ಪ್ರತಿಬಿಂಬ
Airport project will be

# ಪಯಣದ ಪ್ರತಿಬಿಂಬ



ಕೃಷಿ ಆಧಾರಿತ ಸಂಶೋಧನೆಗೆ ಆದ್ಯತೆ ನೀಡಿ
ಬಡವ, ಸಾಮಾನ್ಯ, ಕೃಷಿಕರ ಪರ ಬಜೆಟ್: ಕೇಂದ್ರ ಸಚಿವ ಸಿದ್ದೇಶ್ವರ್
Davangere Meets Investment Requirements: British Official
ಯೂರಿಯಾ ಗೊಬ್ಬರ ಲಭ್ಯ: ಆತಂಕ ಬೇಡ
ಸಾಧನೆ: ಮನೆ ಮನೆ ಸಂಪರ್ಕ ಅಭಿಯಾನಕ್ಕೆ ಸಿದ್ದೇಶ್ವರ ಚಾಲನೆ
ಹೆದ್ದಾರಿಗಳಲ್ಲಿ 'ಬ್ಲ್ಯಾಕ್ ಸ್ಪಾಟ್' ಗುರುತು: ಸಚಿವ ಸಿದ್ದೇಶ್ವರ್
eady to restart train service if States want: Suresh Angadi
ರೈಲ್ವೆ ನಿಲ್ದಾಣಕ್ಕೆ ಹೊಸ ಕಟ್ಟಡ
ಹೆಚ್ಚಿನ ಗ್ರಾಹಕರ ನೋಂದಣಿ
ರೈತರ ಕುಟುಂಬಕ್ಕೆ ಸಿದ್ದೇಶ್ವರ್ ಸಾಂತ್ವನ
ಸ್ಮಾರ್ಟ್ ಸಿಟಿ ತಂದದ್ದು ನಾನು, ನನ್ನ ಪ್ರಯತ್ನದ ಫಲ-ಸಿದ್ದೇಶ್
ಅಶೋಕ ಗೇಟ್ ಸಮಸ್ಯೆಗೆ 'ಪರ್ಯಾಯ ರಸ್ತೆ'ಗೆ
ಜಿಲ್ಲೆಯ 32 ಸ್ಥಳದಲ್ಲಿ ಶೀಘ್ರ ಬಿಎಸ್ಸೆನ್ನೆಲ್ 3ಜಿ ಸೇವೆ ಲಭ್ಯ
ಆರ್‌ಯುಬಿ ನಿರ್ಮಾಣಕ್ಕೆ ನಿರ್ಧಾರ